



# ಚಿಗುರು

S.A.T.HIGHSCHOOL MANJESHWARA

Email: 11007Saths@gmail.com



ವಿದ್ಯಯಾ ಅಮೃತಂ ಅಶ್ನುತೆ

# ಮುಖ್ಯೋಪಾಧ್ಯಾಯರ ನುಡಿಗಳು .......



ಮಾನ್ಯರೇ,

ನಮ್ಮ ಎಸ್ ಎ ಟಿ ಶಾಲೆಯ ಲಿಟ್ಲ್ ಕೈಟ್ಸ್ ಕ್ಲಬ್ ನ ವತಿಯಿಂದ ಒಂದು ಇ ಮ್ಯಾಗಝೀನ್ ಹೊರತರುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಲಿಟ್ಲ್ ಕೈಟ್ಸ್ ಎನ್ನುವುದು ಮಕ್ಕಳಲ್ಲಿರುವ ಸೃಜನಾತ್ಮಕ ಚಟುವಟುಕೆಯನ್ನು ಪೋಷಿಸುವುದಾಗಿದೆ.

ಸುಮಾರು ಒಂದು ವರ್ಷದಿಂದ ಬೇರೆ ಬೇರೆ ಸಮಯಗಳಲ್ಲಿ ಸಿಕ್ಕಿದ ತರಬೇತಿಗಳು ಮುಂದಿನ ದಿನಗಳಲ್ಲಿ ಅವರನ್ನು ಐ ಟಿ ಮಾಸ್ಟರ್ ಗಳನ್ನಾಗಿ ಮಾಡುವುದರಲ್ಲಿ ಯಾವುದೇ ಸಂದೇಹವಿಲ್ಲ. ಈ ಪ್ರಯತ್ನದಲ್ಲಿ ಸಹಕರಿಸುತ್ತಿರುವ ಶಾಲಾ ಲಿಟ್ಲ್ ಕೈಟ್ಸ್ ಮಾಸ್ಟರ್ ಗಳಾದ ಕಿರಣ್ ಕುಮಾರ್ ಹಾಗೂ ಆರತಿ ಟೀಚರ್ ಅವರನ್ನು ಅಭಿನಂದಿಸುತ್ತೇನೆ.ಈ ಪ್ರಯತ್ನವು ಇನ್ನೂ ಹೆಚ್ಚು ಮೇಲ್ಮಟ್ಟಕ್ಕೆ ತಲುಪಲಿ ಎಂದೂ ಉತ್ತಮೋತ್ತಮ ಸಾಧನೆಗಳನ್ನು ಪೂರೈಸುವಂತಾಗಲಿ ಎಂದು ಹಾರೈಸುತ್ತೇನೆ.

ಮುರಳೀ ಕೃಷ್ಣ

ಮುಖ್ಯೋಪಾಧ್ಯಾಯರು.

# ಒಳಪುಟದಲ್ಲಿ .......

ಚಿಗುರು.....1
ಮುಖ್ಯೋಪಾಧ್ಯಾಯರ ನುಡಿಗಳು .....2
ಸಂಪಾದಕರ ಮಾತು.....6
ಒಂದುದಿನದ ಶಾಲಾಮಟ್ಟದ ಶಿಬಿರ.....7
ಉಪಜಿಲ್ಲಾ ಮಟ್ಟದ ಶಿಬಿರ.....8
ಸಂಪಾದಕ ಮಂಡಳಿ.....9
.....
.....9
ಪ್ರಳಯ ನರ್ತನ.....10
निमित्तमात्रम्.....12
ಪ್ರಳಯಾಂತಕ ಕೇರಳ.....13
ಅಮ್ಮನ ಪ್ರೀತಿ.....14
ಯಾರು ಮೇಲು?.....15
ಸೋಮನ ಕೊಳಕುತನ.....18
ಹೂದೋಟ.....19
ಗುಬ್ಬಿ.....20
ಅಪ್ಪ.....21
ಹಾರೈಕೆ.....23
ತಾಯಿ.....24
ಅಮ್ಮನ ಮಾತಿಗೆ ಧಿಕ್ಕರಿಸಿ ಹೋದ ಮಗ.....25
ಹಾಲೆಂದು ನೋಡದೆ ಕದ್ದ ಕಳ್ಳ.....26
ಕೈಲಾಶ್ ಸತ್ಯಾರ್ಥಿ .....27
ಅನಾಥ.....28
.....29
ಪವಿತ್ರವಾದ ನೀರು.....29

ಮಹಾತ್ಮ ಗಾಂಧೀಜಿ....31
....31
ಮಾನವೀಯತೆಯ ಮರೆಯದಿರು....32
ಅಮ್ಮ....34
ಅತಿ ವೃಷ್ಟಿ....35
ವಿಧಿಯ ಆಟ ದೇವರು ನಟ....36
ಅಪ್ಪ....37
....37
ಮಾಯಾ ನದಿ....38
निमित्तमात्रम्....39
स्वदताम् वयम् स्वदताम्....40
....41
Advantage of Demonetisation....41
ಗೆಳತನ....42
ನವ ಕೇರಳ ನಿರ್ಮಾಣ....43
A DAY IN OFFICE....45
....45
....47
ಒಗಟುಗಳು....47
ಗೆಳೆಯ ದೇಶಗಳ ಸಹಾಯ....49
ಬಿ . ಆರ್. ಅಂಬೇಡ್ಕರ್....50
ಮೋಡ....52
ನೀವು ಬಲ್ಲಿರಾ ....53
ಮೋಸಗಾರ ನರಿ....54
ಫ್ಲಾರೆನ್ಸ್ ನೈಟಿಂಗೇಲ್....55
ಗುಣಕ್ಕೆ ಸಿಕ್ಕ ಪ್ರತಿಫಲ....56
ಕಣ್ವತೀರ್ಥದ ಇತಿಹಾಸ....58
ಕಣ್ಣಾರೆ ಕಂಡರು....59
AN IDEAL STUDENT....61
ತಮ್ಮನ ಕಾರು....64
ರೋಡು ರೋಲರು....65

ಪ್ರಕೃತಿ......66
ನೆರೆ......69
ಮಾನವೀಯತೆಯ ಮರೆಯದಿರು......71
बाड़......76
DON IS A DON......77
ದೇಶ ಪ್ರೇಮಿಗಳು......79
ರಾಜನ ಮದುವೆ......80
ಅತಿಯಾಸೆಯ ಫಲ......81
ಆಸೆಗೆ ತಕ್ಕ ಶಾಸ್ತಿ......83
ನೆನಪುಗಳು......85
ರಾಮಯ್ಯ ಮತ್ತು ಭೂತ......85
......87
ಅಮ್ಮ......87
ಒಗಟು......88
ಪುಟ್ಟ ಗುಬ್ಬಿ......90
Advantage of Demonetisation......93
THE UNITED ANTS......96
ಪಕೃತಿ ವಿಕೋಪ ಕಾರಣ ಪರಿಣಾಮ ಪರಿಹಾರೋಪಾಯಗಳು......97
ನಮ್ಮ ಮನೆಯ ಕಣ್ಮಣಿ......99
ತಾಯಿಯೇ ದೇವರು......101




# ಸಂಪಾದಕರ ಮಾತು........

ಸರಕಾರದ ಕನಸಿನ ಕೂಸು ಲಿಟ್ಲ್ ಕೈಟ್ಸ್.ಈ ಯೋಜನೆಯ ಮೂಲ ಉದ್ದೇಶವು ಮಾಹಿತಿ ತಂತ್ರಜ್ಞಾನವುಳ್ಳ ತಲೆಮಾರಿನ ಸೃಷ್ಟಿಯಾಗಿದೆ. ಈ ಉದ್ದೇಶವನ್ನು ಸಾಧಿಸುವ ನಿಟ್ಟಿನಲ್ಲಿ ಕೇರಳ ಸರಕಾರದ ಮಾಹಿತಿ ತಂತ್ರಜ್ಞಾನ ಸಂಸ್ಥೆಯಾದ ಕೈಟ್ಸ್ ಪ್ರತಿ ಶಾಲೆಯಲ್ಲಿ ಲಿಟ್ಲ್ ಕೈಟ್ಸ್ ಎಂಬ ಯುನಿಟನ್ನು ಪ್ರಾರಂಭಿಸಲು ನಿರ್ದೇಶಿಸಿದುದರ ಅಂಗವಾಗಿ ಕೇರಳದ ಹೆಚ್ಚಿನ ಎಲ್ಲಾ ಶಾಲೆಗಳಲ್ಲೂ ಒಂದು ಯಾ ಹೆಚ್ಚು ಯುನಿಟ್ ಅಸ್ತಿತ್ವಕ್ಕೆ ಬಂದಿತು.ಅಂತೆಯೇ ನಮ್ಮ ಎಸ್ ಎ ಟಿ ಶಾಲೆಯಲ್ಲೂ ೨೭ ಮಂದಿಯ ಒಂದು ಯುನಿಟ್ ನ ಸ್ಥಾಪನೆಯಾಯಿತು. ನಮಗೆ ಪ್ರತಿ ಬುಧವಾರ ಸಂಜೆ ವಿವಿಧ ಎಪ್ಲಿಕೇಶನ್ ಸೋಫ್ಟ್ ವೇರ್ ಗಳ ಕಾರ್ಯ ವಿಧಾನಗಳನ್ನು ಈ ತರಗತಿಗಳಲ್ಲಿ ಹೇಳಿಕೊಡಲಾಗುತ್ತದೆ. ಅಂತೆಯೇ ಲಿಬ್ರೆ ರೈಟರ್ ನಲ್ಲಿ ಕನ್ನಡ ಟೈಪಿಂಗ್ ಹಾಗೂ ಅದರ ವಿವಿಧ ಸೌಕರ್ಯಗಳನ್ನು ಪರಿಚಯಿಸಿದ ಬಳಿಕ ಒಂದು ಡಿಜಿಟಲ್ ಮ್ಯಾಗಝೀನ್ ತಯಾರಿಸಲು ಸೂಚಿಸಲಾಯಿತು.ಆದುದರಿಂದ ನಮ್ಮ ಲಿಟ್ಲ್ ಕೈಟ್ಸ್ ತಂಡವು ವಿವಿಧ ತರಗತಿಗಳ ವಿದ್ಯಾರ್ಥಿಗಳನ್ನು ಸಂಪರ್ಕಿಸಿ ವೈವಿಧ್ಯಪೂರ್ಣವಾದ ಬರಹಗಳನ್ನು ಸಂಗ್ರಹಿಸಿತು.ಅವುಗಳನ್ನು ಟೈಪ್ ಮಾಡಿ ಅದಕ್ಕೆ ಸುಂದರವಾದ ಚೌಕಟ್ಟನ್ನು ನಿರ್ಮಿಸಿ ‘‘**ಚಿಗುರು**‘ ” ಎಂಬ ಹೆಸರಿನ ಈ ಪುಸ್ತಕವನ್ನು ತಮ್ಮ ಮುಂದಿಡುತ್ತಿದ್ದೇವೆ.ಇದರಲ್ಲಿನ ಲೋಪದೋಷಗಳನ್ನು ಕ್ಷಮಿಸಿ ತುಂಬು ಮನಸ್ಸಿನಿಂದ ಸ್ವೀಕರಿಸುವಿರಾಗಿ ನಂಬುತ್ತೇನೆ. ಈ ಪುಸ್ತಕದ ನಿರ್ಮಾಣಕ್ಕೆ ನಮಗೆ ಬೆನ್ನೆಲುಬಾಗಿ ನಿಂತು ಹುರಿದುಂಬಿಸಿ ಸೂಕ್ತ ಮಾರ್ಗದರ್ಶನಗಳನ್ನಿತ್ತ ನಮ್ಮ ಲಿಟ್ಲ್ ಕೈಟ್ಸ್ ಅಧ್ಯಾಪಕರಾದ ಶ್ರೀಯುತ ಕಿರಣ್ ಕುಮಾರ್ ಹಾಗೂ ಶ್ರೀಮತಿ ಆರತಿ ಟೀಚರ್ ಅವರಿಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹಾಗೆಯೇ ಸಹಕರಿಸಿದ ಎಲ್ಲ ಅಧ್ಯಾಪಕರಿಗೆ ,ಯುನಿಟ್ ನ ಸದಸ್ಯರಿಗೆ ಸಂಪಾದಕಿ ಎಂಬ ನೆಲೆಯಲ್ಲಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸಂಪಾದಕ



# ಒಂದುದಿನದ ಶಾಲಾಮಟ್ಟದ  ಶಿಬಿರ












# ಉಪಜಿಲ್ಲಾ ಮಟ್ಟದ ಶಿಬಿರ






# ಸಂಪಾದಕ ಮಂಡಳಿ

1. SAMITHA
2. TRISHA K
3. PREETHIKA P
4. TRIJA K
5. NEHA
6. VISHANATH V S
7. SRIJAN KUMAR G S
8. ALEEMATH SAIMA
9. DEEPARAJ
10. VAJRESH
11. AMINATH ARFANA K A
12. TEJASWINI
13. FATHIMATH HSNA
14. SHIVANJALI R
15. SINCHANA R
16. PRAJNA
17. DEEPTHI
18. RAMEEZA
19. JITHESH
20. SHANTHI KRIPA
21. APSANA
22. VISWAJITH K
23. MADHUSHREE
24. CHITHRA
25. NAFEESATH FHAMEEZA
26. DEEKSHA
27. MEGHA S K



# ಪ್ರಳಯ ನರ್ತನ

ಬೇಸಿಗೆ ಬಿಸಿಲಿಗೆ ಕಂಗೆಟ್ಟ ಜನತೆಗೆ
ಸಂತಸ ತಂತು ಮಳೆಗಾಲ
ಎಲ್ಲರಿಗೂ ಕಳೆಯಿತು ಬರಗಾಲ
ಸಿಡಿಲಿನ ಆರ್ಭಟ ಕೇಳಲು ನಡುಕ
ಮನದಲ್ಲಿ ಏನೋ ಆತಂಕ
ಎಡೆಬಿಡದೆ ಸುರಿಯುವ ಮಳೆಯು
ಬಿಸಿಲಿನ ಕಾಣುವ ಆಸೆಯ ತಂತು
ಕಾರ್ಮೋಡಗಳ ಮಿಂಚಿನ ಜೊತೆಗೆ
ಅಪ್ಪಳಿಸಿತು ಎಡೆಬಿಡದೆ ಮಳೆ
ವರುಣಗೆ ಅಪರಾಧಿಯೆ ನಮ್ಮ ಬುವಿ ?
ಅಥವಾ ಕೋಪವೆ ನಮ್ಮಲ್ಲಿ
ನೋಡುನೋಡುತ್ತ ಮುಳುಗಿತು ಕೇರಳ
ಜನರಿಗೆ ಆಯಿತು ಗೊಂದಲವು
ಜಡಿ ಮಳೆ ಕಂಡು ಕಂಗಾಲು
ದೇವರೇ ನೀಡು ಸಹಿಸುವ ಶಕ್ತಿ
ಕಾಣಿಸು ಪ್ರಾಣವ ಉಳಿಸುವ ಯುಕ್ತಿ
ಬೆಟ್ಟ ಕುಸಿಯಿತು, ಭೂಮಿ ಬಿರಿಯಿತು



ಮನೆಮಠಮಂದಿರಗಳೆಲ್ಲವು
ಜಲ ಸಮಾಧಿಯಾಯಿತು
ಕೃಷಿಕರಿಗೆ ಆಯಿತು ನಾಶನಷ್ಟ
ಜನರಿಗೆ ಉಂಟಾಯಿತು ಸಂಕಷ್ಟ
ನವ ಕೇರಳಕ್ಕೆ ಕೈ ಜೋಡಿಸೋಣ
ಇತರರ ಕಷ್ಟಕೆ ಮಿಡಿಯೋಣ
ನಮ್ಮಯ ನಾಡಿನ ಜನತೆಯ ಕಷ್ಟಕೆ
ಸಹಾಯ ಹಸ್ತವ ಚಾಚೋಣ
ಕಂಬನಿ ಒರೆಸುವ ಕೈಯ್ಯಾಗೋಣ
ಸಹಕಾರ ನೀತಿಯ ಜನತೆಗೆ ತಿಳಿಸುವ
ಹರಿಕಾರರು ನಾವಾಗೋಣ

ರಕ್ಷಿತಾ ಜೆ



# निमित्तमात्रम्

पाण्डवकौरवयोः युद्धम् प्रवर्तमानम् आसीत्। रणरंगे आसीत् अर्जुनः। प्रतिपक्षे आसीत् कर्णः। तयोः युद्धम् आरब्धम्। तयोःदृष्टुम् आकाशे देवाःपंक्तिशः स्थितवंतः। अर्जुनस्य बाणेन आहतः कर्णः  कम्पमानःसन् त्रिंशदधिकपादपरिमितं पृष्ठतःअसरत्।

ये पश्यन्तःआसन् ते सर्वे अर्जुनस्य शौर्य दृष्टवा मूकविस्मिताः अभवन्।

कर्णस्य शौर्यमपि अर्जुनस्य शौर्यात् न्यूनं तु न आसीत्। कर्णस्य बाणस्य आघातेन कम्पमानः अर्जुनस्य रथः त्रिचतुरपादपरिमितं पृष्ठतः असरत्। तदा कृष्णः एव कर्णस्य शौर्यं श्लाघितवान्। परन्तु कदाचिदपि कृष्णेन अर्जुनस्य शौर्यं न श्लाघितम्। एतत् अर्जुनेन अपि लक्षितम् आसीत्। दिनान्ते दुःखितः अर्जुनः कृष्णम् अपृच्छत् कृष्ण,मम बाणेन आहतः कर्णस्य़ रथः कम्पमानः पक्षी इव सुदूरं पृष्ठतःअसरत्।अनेकवारम् एवं जातम्। किन्तु भवता मम कौशल्यस्य श्लाघनं न कदाचिदपि कृतम्। कर्णेन प्रहतः मम रथः किञ्चिदेव यदा व्यचलत् तदा भवता भृशं तस्य शौर्य श्लाघितम् । किमर्थम् एवम्

तदा  कृष्णः अवदत् ‘अर्जुना,तव रथस्य ऊर्ध्व भागे हनुमान् अस्ति। सः तं भागं रक्षति। अग्रभागःतव सारथिना मया रक्ष्यते। एवं स्थिते अपि कर्णस्य बाणेन आहतः तव रथः न केवलमं कम्पितः, अपि तु त्रिचतुरपादपरिमितं पृष्ठतः असरत् अपि!कर्णस्य रथस्य रक्षकः तु सः एकः एव । तथापि महत् शैर्यं दर्शितं तेन। ‘

पश्चात्  अर्जुनः स्यात् अवतरणं कृतवान्। अर्जुनस्य अवतरणस्य अनन्तरं कृष्णः रथात् अवतीर्णः। यदा कृष्णः अधः आगतवान् तदा रथः भस्मीभूतः!! अस्मिन् समये कृष्णेन उक्तम् अर्जुन,एतत् त्वया अविदितंस्यात्। तव रथः कर्णेन ध्वंसितःआसीत् पूर्वमेव। एतावत्पर्यंतम् अहम् एव रथस्य रक्षणं कुर्वन् ,अहं साधितवान् इति अहम्भावः न प्रदर्शनीयः। सर्वदा साधनायाः सहायकाः कारणानि च भवन्ति अनेके। गर्वम् अहम्भावं च त्यक्त्वा अस्माभिः कार्याणि करणीयम्।



# ಪ್ರಳಯಾಂತಕ ಕೇರಳ

ಭೀಕರವಾಗಿ ಬಂದ ಪ್ರಳಯ
ಎಲ್ಲರಲ್ಲಿ ಹುಟ್ಟಿಸಿತು ಭಯ
ನೀ ಯಾಕೆ ತಂದೆ ಇಂತಹ ಅಪಾಯ
ಕೇರಳದವರು ಏನು ಮಾಡಿದ್ದಾರೆ ನಿನಗೆ ಅನ್ಯಾಯ

ತತ್ತರಿಸಿತು ಕೇರಳ ನಿನ್ನಿಂದ
ಮರೆಯಾಯಿತು ಎಲ್ಲರ ಆನಂದ
ಹೆಚ್ಚಿಸಬೇಡ ನಿನ್ನ ಕೋಪ
ಬಲಿಯಾಗುತ್ತಾರೆ ಕೇರಳದವರು ಪಾಪ

ನೀ ಬಂದೆ ಪುಟ್ಟ ಸುನಾಮಿಯಂತೆ
ತೆಗೆದೆ ಎಲ್ಲರ ಪ್ರಾಣ ಒಂದೊಂದರಂತೆ
ಅವರಿಂದ ಕಸಿದೆ ಸುಖ
ಬದಲಾಗಿ ಕೊಟ್ಟೆ ಅವರಿಗೆ ದುಃಖ

ಸಾವಿರ ಸಾವಿರ ಕೃಷಿ ನಾಶವಾದರೂ
ಲಕ್ಷ ಲಕ್ಷ ಜನ ಸತ್ತರೂ
ಕೋಟಿ ಕೋಟಿ ನಷ್ಟವಾದರೂ
ನಿನಗೆ ಆಗಲಿಲ್ಲವೇ ತೃಪ್ತಿ

ಇನ್ನು ಬರಬೇಡ ಈ ರೀತಿ
ಇದರಿಂದ ಎದುರಾಗುವುದು ಹಲವಾರು ಭೀತಿ
ಸಾಕು ನಿನ್ನ ಹುಡುಗಾಟ
ನಿಲ್ಲಿಸು ನೀ ಕೊಡುವ ಕಾಟ



ಚೈತ್ರ , 9 ಡಿ

# ಅಮ್ಮನ ಪ್ರೀತಿ

*ನೀತಿ ಪಾಠಗಳ ಕಲಿಸಿ*
*ಜೀವನ ಮಾರ್ಗವ ತಿಳಿಸಿ*
*ಬೆಳೆಸಿದವಳೆ ಈ ಮಾತೆ*
*ನಾನು ಮರೆಯಲಾರೆ ಇವಳ ಮಮತೆ*

*ತನ್ನ ಕಷ್ಟವ ಮರೆತು*
*ನನ್ನ ಜೊತೆಗೆ ಬೆರೆತು*
*ಆಡುವಳು ಸಿಹಿ ಮಾತು*
*ಇದುವೆ ನನ್ನ ಸಂಪತ್ತು*

*ತಪ್ಪು ಮಾಡಿದರೆ ತಿದ್ದಿ*
*ನನಗೆ ಹೇಳುವಳು ಬುದ್ಧಿ*
*ಇವಳೆ ನನ್ನಯ ಮಾತೆ*
*ಇವಳ ಪ್ರೀತಿಗೆ ನಾ ಸೋತೆ*

*ಜೀವನಕ್ಕೊಂದು ದಾರಿ*
*ನನಗೆ ನೆಮ್ಮದಿಯ ತೋರಿ*
*ಸಾರ್ಥಕವಾಗಿಸುವಳು ಜೀವನ*
*ನನ್ನನಾಗಿಸುವಳು ಪಾವನ*

*ನಿನ್ನನು ಮರೆಯಲಾರೆ ನಾ*
*ನನ್ನೊಂದಿಗೆ ಇರು ಎಂದೇ ಬೇಡುವೆ ನಿನ್ನ*
*ಬೇಡೆನು ನನಗಾಗಿ ಇನ್ನೇನನ್ನ*



*ಚೈತ್ರ 9D*

# ಯಾರು ಮೇಲು ?

ಸಿದ್ಧಾಪುರವು ಒಂದುಸುಂದರವಾದ ಹಳ್ಳಿ.ಅಲ್ಲಿ ಸೋಮಪ್ಪ ಎಂಬ ಒಬ್ಬಬಡ ರೈತನಿದ್ದನು. ಅವನ ಮಡದಿ ಗಂಗಮ್ಮ.ಅವರಿಗೆ ಇಬ್ಬರು ಮುದ್ದಾದ ಮಕ್ಕಳಿದ್ದರು.ಮೊದಲನೆಯವನು ರಮೇಶ ಎರಡನೆಯವನು ಸುರೇಶ.ದಂಪತಿಗಳಿಗೆ ಮೊದಲ ಮಗ ರಮೇಶನಲ್ಲಿ ಏಕೋ ವಿಶೇಷವಾದ ಮಮತೆ. ಮಕ್ಕಳಿಬ್ಬರೂ ಶಾಲೆಗೆ ಹೋಗುತ್ತಿದ್ದರು ಓದಿನಲ್ಲೂ ಜಾಣರಾಗಿದ್ದರು.ದೊಡ್ಡ ಮಗ ರಮೇಶನು ಹತ್ತನೇ ತರಗತಿಯಲ್ಲಿ ಉತ್ತಮ ಅಂಕಗಳನ್ನು ಗಳಿಸಿ ಉನ್ನತ ವಿದ್ಯಾಭ್ಯಾಸವನ್ನೂ ಮಾಡಿದನು. ಆದರೆ ಸಣ್ಣ ಮಗನಿಗೆ ಉನ್ನತ ವಿದ್ಯಾಭ್ಯಾಸ ಕೊಡಿಸಲು ಬಡತನವು ಅಡ್ಡಿಪಡಿಸಿತು ಮಾತ್ರವಲ್ಲ ಕೃಷಿಯನ್ನು ಮುಂದುವರಿಸುವವರು ಯಾರು ಎಂಬ ಪ್ರಶ್ನೆಯೂ ಕಾಡಿತು.. ಕಲಿಯುವ ಆಸಕ್ತಿ ಅರ್ಹತೆಗಳಿದ್ದರೂ ಹಿರಿಯರ ಮನದಿಂಗಿತವನ್ನು ಅರ್ಥಮಾಡಿಕೊಂಡ ಸರಳ ಸ್ವಭಾವದ ಸುರೇಶನು ಮನೆಯಲ್ಲಿದ್ದುಕೊಂಡು ತಂದೆಯ ಕೆಲಸದಲ್ಲಿ ಕೈಜೋಡಿಸಿ ಉತ್ತಮ ಕೃಷಿಕನೆನ್ನಿಸಿಕೊಂಡನು.

ದಿನಗಳು ಕಳೆದುವು. ಸುರೇಶನು ಇಂಜಿನಿಯರ್ ಕೆಲಸಕ್ಕಾಗಿ ವೀದೇಶಕ್ಕೆ ಹೋದನು. ಈಗಂತೂ ತಂದೆ ತಾಯಿ ಇಬ ರಮೇಶನಿಗೆ ಬೈಯುವುದು ಹೆಚ್ಚಾಯಿತು. ಅಕ್ಕ ಪಕ್ಕದ ಮನೆಯವರಲ್ಲಿ ತನ್ನ ದೊಡ್ಡ ಮಗನನ್ನು ಹೊಗಳಿ ಚಿಕ್ಕ ಮಗನನ್ನು ಬಯ್ಯುತ್ತಿದ್ದರು. ಆದರೂ ರಮೇಶ ಮಾತ್ರ ಇದಕ್ಕೆ ಲ್ಲ ತಲೆಕೆಡಿಸುತ್ತಲೇ ಇರಲಿಲ್ಲ . ದೊಡ್ಡ ಮಗ ಸುರೇಶನು ಹೋಗಿ ಒಂದು ತಿಂಗಯಳಾಯಿತು ಆ ಸಮಯದಲ್ಲಿ ಒಂದು ಪತ್ರವೂ ಸಂಬಳದ ಹಣವೂ ಅಂಚೆಯ ಮೂಲಕ ಅವರ ಕೈಸೇರಿತು. ಇದನ್ನು ನೋಡಿ ತಂದೆ ತಾಯಿಗಳಿಬ್ಬರಿಗೂ ಸಂತೋಷವೋ ಸಂತೋಷ.ಅವರಿಬ್ಬರೂ ಬಿಡುವಿನ ವೇಳೆಯನ್ನು ಅವನನ್ನು ಹೊಗಳುವುದರಲ್ಲೇ ಕಳೆಯುತ್ತಿದ್ದರು.

ಹೀಗೆ ಐದು ತಿಂಗಳು ಕಳೆದವು.ಆರನೇ ತಿಂಗಳು ಹಣವೂ ಪತ್ರವೂ ಬರಲಿಲ್ಲ. ದಂಪತಿಗಳು ಕಾದುಕಾದು ಸುಸ್ತಾದರು. ಮರು ತಿಂಗಳೂ ಇದು ಆವರ್ತಿಸಿತು.ತಂದೆತಾಯಿ ಏನೇನೋ



ಆಡಿಕೊಳ್ಳುತ್ತಿದ್ದರೂ ಸುರೇಶನು ಮನದಲ್ಲಿನ ಭಾವಗಳನ್ನು ತೋರಿಸುತ್ತಿರಲಿಲ್ಲ. ಅವರ ದುಃಖ ಹೆಚ್ಚಾಗದಿರಲೆಂದು ಅವನು ಅಣ್ಣನಿಗೆ ಪುರುಸೊತ್ತು ಇರದ ಕಾರಣ ಕಳುಹಿಸಿಲ್ಲವಾಗಿರಬಹುದೆಂದು ಹೇಳಿ ಸಮಧಾನಿಸುತ್ತಿದ್ದನು.ಕೊನೆಗೊಂದು ದಿನ ಅವನೇ ಪತ್ರ ಬರೆದು ಕಳುಹಿಸಿದನು. ಅದಕ್ಕೂ ಉತ್ತರ ಬಾರದಿದ್ದಾಗ ಸುರೇಶನ ಮನಸ್ಸು ಕೆಟ್ಟದನ್ನು ಶಂಕಿಸಿತು.

ಗಂಗಮ್ಮಳಂತೂ ಮಗನ ಚಿಂತೆಯಲ್ಲಿ ಹಾಸಿಗೆ ಹಿಡಿದಳು. ಹಗಲೂ ರಾತ್ರಿ ಮಗನದೇ ಕನವರಿಕೆಯಲ್ಲಿ ದಿನ ದೂಡುತ್ತಿದ್ದಳು. ಒಂದು ದಿನ ರಮೇಶನ ಜೊತೆಯಲ್ಲಿ ವಿದೇಶಕ್ಕೆ ಹೋದ ಗಿರೀಶನೆಂಬ ಹುಡುಗ ಮನೆಗೆ ಬಂದಿರುವ ಸುದ್ದಿ ಲಭಿಸಿತು.ಕೂಡಲೇ ಸೋಮಪ್ಪನು ದಾಪುಗಾಲಿಟ್ಟು ಅವನ ಮನೆಗೆ ಹೋದನು.ಅವನಲ್ಲಿ ತನ್ನ ಮಗನ ಬಗ್ಗೆ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದನು.ಆದರೆ ಅದಕ್ಕೆಲ್ಲ ಗಿರೀಶನ ಮೌನವೇ ಉತ್ತರವಾಯಿತು.ಕೊನೆಗೆ ತನ್ನ ಮಗನ ಬಗ್ಗೆ ಹೇಳೆಂದು ಸೋಮಪ್ಪನು ಅಂಗಲಾಚಿದಾಗ ಅವನು ತುಂಬ ಕಷ್ಟದಲ್ಲಿರುವನೆಂದೂ ಅವನನ್ನು ಅಲ್ಲಿ ಆಹಾರ ಸೇವನೆಗೂ ಸಮಯ ನೀಡದೆ ಚೆನ್ನಾಗಿ ದುಡಿಸುತ್ತಾರೆಂದೂ ಸಂಬಳವನ್ನೂ ಕೊಡುವುದಿಲ್ಲವೆಂದೂ ಹೇಳಿದನು. ಗಿರೀಶನು ತಾನು ಅಲ್ಲಿಂದ ಹೇಗಾದರೂ ತಪ್ಪಿಸಿಕೊಂಡು ಬಂದೆನೆಂದೂ ತಿಳಿಸಿದನು. ಇದರಿಂದಾಗಿ ಇನ್ನಷ್ಟು ಜರ್ಝರಿತರಾದ ತಾಯಿಯು ಕೊರಗಿ ಕೊರಗಿ ಇಹಲೋಕವನ್ನು ತ್ಯಜಿಸಿದಳು.ಅವಳನ್ನು ಉಳಿಸಲು ಸುರೇಶನು ಮಾಡಿದ ಪ್ರಯತ್ನವು ವಿಫಲವಾಯಿತು.

ಸೋಮಪ್ಪನೂ ಈ ಘಟನೆಯ ನಂತರ ಮೌನಿಯಾಗಿದ್ದನು. ಅವನಿಗೆ ಯಾವುದರಲ್ಲೂ ಆಸಕ್ತಿಯಿರಲಿಲ್ಲ.ತಂದೆಯ ಬೇಸರವನ್ನು ದೂರಮಾಡಲು ಸುರೇಶನು ಇನ್ನಿಲ್ಲದ ಪ್ರಯತ್ನವನ್ನು ಮಾಡುತ್ತಿದ್ದನು.ಆದರೆ ಸೋಮಪ್ಪನು ಆ ಪ್ರಯತ್ನಗಳಿಗೆ ಹೆಚ್ಚೇನೂ ಸ್ಪಂದಿಸುತ್ತಿರಲಿಲ್ಲ. ಆದರೆ ಸುರೇಶನ ಬಗೆಗೆ ಅವನ ಭಾವನೆಗಳು ಬದಲಾಗಿದ್ದುವು.ತಾವು ಎಷ್ಟೇ ಹೀನೈಸಿದರೂ ತಮ್ಮ ಸೇವೆಯನ್ನು ಆದರದಿಂದ ಮಾಡುತ್ತಿದ್ದ ಮಗನನ್ನು ಕಂಡಾಗ ಅವನು ಹನಿಗಣ್ಣಾಗುತ್ತಿದ್ದನು.ಮಗನ ಬಗ್ಗೆ ಇನ್ನಿಲ್ಲದ ಅಭಿಮಾನ ಮೂಡುತ್ತಿತ್ತು.



ಹೀಗೇ ಯಾವುದೇ ಬದಲಾವಣೆಗಳಿಲ್ಲದೆ ದಿನಗಳು ಉರುಳುತ್ತಿದ್ದುವು.ಒಂದು ದಿನ ಅವರ ಮನೆಯಂಗಳದಲ್ಲಿ ಬೆಳಂಜಾವದಲ್ಲೇ ಆಗಂತುಕನೊಬ್ಬನು ಬಂದು ನಿಂತಿದ್ದುದನ್ನು ಕಂಡ ಸುರೇಶನು ಹೊರಗೆ ಹೋದನು.ಆ ವ್ಯಕ್ತಿಯು ಮೂಳೆಚಕ್ಕಳದಂತಿದ್ದನು. ಕರುಣೆಯಾಗಿದ್ದ ಸುರೇಶನು ಅವನಿಗೆ ಮನೆಯೊಳಗಿನಿಂದ ಸ್ವಲ್ಪ ಗಂಜಿಯನ್ನು ಕೊಟ್ಟನು.ಅದನ್ನು ಕುಡಿಯುವ ವರೆಗೆ ಕಾದು ಅವನ ಪೂರ್ವಾಪರಗಳ ಕುರಿತು ಪ್ರಶ್ನಿಸಿದನು.ಅದಕ್ಕೆ ಆಗಂತುಕನು, ‘‘ನನ್ನನ್ನು ಗೊತ್ತಿಲ್ಲವೇನೋ? ನಿನ್ನ ಅಣ್ಣ ಕಣೋ, ಪಾಪಿ ನಾನು;ವಿದ್ಯಾಭ್ಯಾಸವಿದ್ದೂ ಅಪ್ಪ ಅಮ್ಮನನ್ನು ಸಾಕದೇ ಹೋದೆ”. ಎನ್ನುತ್ತಾ ಗೋಳೋ ಎಂದು ಅತ್ತನು.ಸುರೇಶನು ಮಾತುಮರೆತವನಂತೆ ನಿಂತಿದ್ದನು. ಅದನ್ನು ಕೇಳಿದ ಸೋಮಪ್ಪನು ಮನೆಯಿಂದ ಹೊರಬಂದನು. ತನ್ನ ಮಗನ ಸ್ಥಿತಿಯನ್ನು ನೋಡಿ ಮಮ್ಮಲ ಮರುಗಿದನು.ಎಚ್ಚೆತ್ತ ಸುರೇಶನು ಇಬ್ಬರನ್ನೂ ಮನೆಯೊಳಗೆ ಕರೆದೊಯ್ದನು.ಅಣ್ಣನಿಗೆ ಉಡುಪುಗಳನ್ನು ಕೊಟ್ಟು ಸ್ನಾನ ಮಾಡಿ ಬರಲು ಹೇಳಿದನು.ಮೂಕನಾಗಿದ್ದ ಸೋಮಪ್ಪನು ಹೃದಯ ಹಗುರಾದಾಗ ಸಣ್ಣ ಮಗನನ್ನು ನಡೆಸಿಕೊಂಡ ರೀತಿಗಾಗಿ ಕ್ಷಮೆ ಯಾಚಿಸಿದನು.

ಆಗ ರಮೇಶನು ಅಮ್ಮ ಎಲ್ಲಿ ಕಾಣ್ತಿಲ್ಲ ಎಂದನು. ಇಬ್ಬರೂ ಮೌನಿಗಳಾದರು. ಪುನಃ ಕೇಳಿದಾಗ ಸುರೇಶನು ಅಮ್ಮ ನಮ್ಮೆಲ್ರನ್ನೂ ಬಿಟ್ಟು ಹೋಗ್ಬಿಟ್ಲು ಕಣೋ ಎಂದು ದುಃಖಿಸುತ್ತಾ ನಡೆದ ಎಲ್ಲಾ ಕಥೆಯನ್ನು ಸವಿಸ್ತಾರವಾಗಿ ತಿಳಿಸಿದನು.ನಿನ್ನಂಥ ತಮ್ಮನನ್ನು ಪಡೆದ ನಾನು ಧನ್ಯ ಎನ್ನುತ್ತಾ ರಮೇಶನು ತಮ್ಮನನ್ನುಅಪ್ಪಿಕೊಂಡನು. ಹೀಗೆ ಆ ಮನೆಯಲ್ಲಿ ಪುನಃ ಜೀವಂತಿಕೆ ನೆರಳಾಡತೊಡಗಿತು.

ಚೈತ್ರಾ

೯ನೇ ತರಗತಿ



## ಸೋಮನ ಕೊಳಕುತನ

ಒಂದು ಊರಿನಲ್ಲಿ ಸೋಮನೆಂಬ ಹುಡುಗನಿದ್ದನು.ಕೊಳಕು ಕೊಳಕಾಗಿ ಇರುತ್ತಿದ್ದ.ಅವನ ತಂದೆ ತಾಯಿ ಎಷ್ಟು ಹೇಳಿದರೂ ಕೇಳುತ್ತಿರಲ್ಲಿಲ್ಲ.ಅವನ ಕೊಳಕುನವನ್ನು ಕಂಡ ಗೆಳೆಯರಾರೂ ಅವನೊಡನೆ ಆಟವಾಡಲು ಬರುತ್ತಿರಲಿಲ್ಲ.ಸೋಮನಿಗೆ ಇದರಿಂದ ಬಹಳ ಬೇಸರವಾಯಿತು.ಗೆಳೆಯರು ಬರದ್ದರೇನಂತೆ 'ನಾನು ಪ್ರಾಣಿಗಳೊಡನೆ ಆಟವಾಡುತ್ತೇನೆ'ಎಂದುಕೊಂಡು ಸೋಮ ಮನೆಯಿಂದ ಹೊರಟನು.ದಾರಿಯಲ್ಲಿ ಒಂದು ಬೆಕ್ಕು ಎದುರಾಯಿತು.ಸೋಮ ಅದನ್ನು ಆಟವಾಡಲು ಕರೆದ.ಬೆಕ್ಕು ಅವನನ್ನು ನೋಡಿ 'ಥೂ ಕೊಳಕ ನಿನ್ನ ಜೊತೆ ನಾನು ಬರಲ್ಲಪ್ಪ! ನೋಡು, ನಾನು ಎಷ್ಟು ಸ್ವಚ್ಛವಾಗಿದ್ದೇನೆ! ಎಂದಿತು.

ಸೋಮ ಮುಂದೆ ನಾಯಿಯನ್ನು ಕಂಡು ಅದನ್ನು ಎತ್ತಿಕೊಳ್ಳಲು ಹೋದ.ನಾಯಿ ಅವನನ್ನು ಕಂಡ ತಕ್ಷಣ ದೂರ ಸರಿದು 'ಅಯ್ಯೋ .....ನೀನು ನನ್ನನ್ನು ಮುಟ್ಟಬೇಡ,ಈಗ ತಾನೇ ನಾನು ಸ್ನಾನ ಮಾಡಿ ಬಂದೆ. ನನ್ನಿಂದ ದೂರ ಹೋಗು' ಎಂದಿತು.ಸೋಮನಿಗೆ ಇದನ್ನು ಕೇಳಿ ಬೇಸರವಾಯಿತು.ಅವನು 'ನನಗಾರು ಸ್ನೇಹಿತರಿಲ್ಲ ನಾನು ಯಾರೊಡನೆ ಆಟವಾಡಲಿ? ಎಂದುಕೊಂಡಾಗ ಹತ್ತಿರದ ಚರಂಡಿಯಿಂದ 'ಓ ಗೆಳೆಯಾ, ಯಾಕೆ ಚಿಂತಿಸುತ್ತಿರುವೆ? ನಿನ್ನ ಗೆಳೆಯ ನಾನಿಲ್ಲವೇ ಇಲ್ಲಿ? ತುಂಬಾ ಒಳ್ಳೆಯ ಜಾಗವಿದೆ; ಬಾ ಇಲ್ಲಿಯೇ ಆಟವಾಡೋಣ'ಎಂಬ ಕೂಗು ಕೇಳಿಸಿತು.ಸೋಮನು ಚರಂಡಿಯ ಬಳಿ ಬಂದು ನೋಡಿದಾಗ ಒಂದು ಕೊಳಕು ಹಂದಿಯು ಅವನನ್ನು ಕರೆಯುತ್ತಿತ್ತು.

ಅದನ್ನು ನೋಡಿದ ಸೋಮನಿಗೆ 'ತಾನು ಸ್ವಚ್ಛವಾಗಿದ್ದರೆ ಮಾತ್ರ ಆಡಲು ಒಳ್ಳೆಯ ಗೆಳೆಯರು ಸಿಗುತ್ತಾರೆ.ಇಲ್ಲವಾದರೆ ಈ ಹಂದಿಯೇ ಗತಿ' ಎಂದು ಅರಿವಾಯಿತು.ತಕ್ಷಣ ಅವನು ಮನೆಗೆ ಹೋಗಿ ಸ್ನಾನ ಮಾಡಿ, ಒಳ್ಳೆಯ ಬಟ್ಟೆಯನ್ನು ಧರಿಸಿಕೊಂಡು ಹೊರಬಂದ.ಸ್ವಚ್ಛವಾಗಿದ್ದ ಅವನನ್ನು ಎಲ್ಲರೂ ಆಟಕ್ಕೆ ಸೇರಿಸಿಕೊಂಡರು.



ದೀಪ್ತಿ 9C

# ಹೂದೋಟ

ತೋಟ ತೋಟ ಹೂದೋಟ

ನಮ್ಮಯ ಸುಂದರ ಹೂದೋಟ

ಸಂದರವಾದ ಹೂವುಗಳು

ಅರಳಿನಿಂತಿಹ ಹೂದೋಟ

ಮರಗಿಡ ತಂಬಿದ ಹೂದೋಟ

ನನ್ನಯ ಇಷ್ಟದ ಹೂದೋಟ

ನಾನು ನೀರನು ಹಾಕುವೆನು

ಹೂವನು ಕೊಯ್ದು ಮುಡಿಯುವೆನು

ಮನೆಯ ಮುಂದಿದೆ ಹೂದೋಟ

ಶಾಲೆಯ ಮುಂಗಡೆ ಹೂದೋಟ

ಚಿಟ್ಟೆಗಳಿರುವ  ಹೂದೋಟ

ತಾವರೆ ಕೊಳವಿಹ ಹೂದೋಟ

ಸುಂದರವಾದ ಹೂದೋಟ

ಗ್ರೀಷ್ಮಾ        ೬ಎ

# ಗುಬ್ಬಿ

ಪುಟ್ಟ ಗುಬ್ಬಿ ದೊಡ್ಡ ಮರದಿ
ಗೂಡು ಕಟ್ಟಿತು
ಹಲವು ದಿನ ಕಳೆದುಪುಟ್ಟ
ಮೊಟ್ಟೆಯಿಟ್ಟಿತು
ಮೊಟ್ಟೆಯಿಟ್ಟು ಕಾವು ಕೊಟ್ಟು
ಮರಿಯ ಮಾಡಿತು
ಅಲ್ಲಿ ಇಲ್ಲಿ ಸುತ್ತಿಸುಳಿದು
ಕಾಳು ತಂದಿತು
ತನ್ನ ಮರಿಗೆ
ಕಾಳ ಕೊಟ್ಟು ಸಾಕಿ ಬೆಳೆಸಿತು
ಗುಬ್ಬಿ ಮರಿಗೆ
ರೆಕ್ಕೆ ಪುಕ್ಕ ಬೆಳೆಯತೊಡಗಿತು
ತನ್ನ ಮರಿಗೆ
ಪುಟ್ಟ ಗುಬ್ಬಿ ಹಾರೆ ಕಲಿಸಿತು
ಒಂದು ದಿನ
ಗುಬ್ಬಿ ಮರಿ ಹಾರಿ ಹೋಯಿತು
ಅದನು ನೋಡಿ
ಪುಟ್ಟ ಗುಬ್ಬಿ ಖುಷಿಯ ಪಟ್ಟಿತು



ಮನೀಷಾ   ೬ ನೇ ತರಗತಿ

## ಅಪ್ಪ




ಅಪ್ಪನ ಕೈಯ್ಯ ಅಡುಗೆಯ ರುಚಿಯ
ಸವಿಯಲು ಪುಣ್ಯವು ಬೇಕು
ಅವರ ಸವೆದ ಚಪ್ಪಲಿ ಹಾಕಿ
ನಾಲ್ಕು ಹೆಜ್ಜೆಗಳ ನಡೆಯಲೆಬೇಕು
ಅಪ್ಪನ ನಗುವಿ ಹಿಂದಿಹ ನೋವ
ತಿಳಿದವರಾರಿಲ್ಲ ತಿಳಿವವರಾರಿಲ್ಲ
ಮನದಲಿ ಎಷ್ಟೇ ಚಿಂತೆಗಳಿದ್ದರು
ನಮ್ಮೊಡನಾಡುವರು ನಗುನಗುತ
ರಾತ್ರಿಯ ನಿದ್ದೆಲಿ ಹೊದಿಕೆಯು ಸರಿಯಲು
ಹೊದಿಕೆಯ ಹೊದೆಸುವರು
ಸದ್ದನು ಮಾಡದೆ ನಿದ್ರೆಯ ಕೆಡಿಸದೆ
ತಲೆಯನು ಸವರಿ ಹೋಗುವರು
ಶಾಲೆಯ ಪರೀಕ್ಷೆಲಿ ನಾಪಾಸಾದರೆ
ಹುಸಿಗೋಪವನು ತೋರುವರು
ದುಃಖದಿನಾನು ಅಳುತಿರುವಾಗ
ಮುಂದಿನ ಬಾರಿ ಸರಿಮಾಡೆನುತ
ಅವರೇ ನನ್ನನ್ನು ರಮಿಸುವರು
ಜಾತ್ರೆಯ ದಿನದಿ ಭುಜದಲಿ ಹೊತ್ತು
ಸಂತೆಯ ತುಂಬಾ ತಿರುಗುವರು

ಬೇಕುಬೇಡಗಳ ಪೂರೈಸುತಲಿ
ನನ್ನಯ ಹೀರೋ ಆಗುವರು
ಅಮ್ಮನ ಎಲ್ಲರು ಹೊಗಳುವರು
ಅಪ್ಪನ ಸವೆತವ ಗಮನಿಸರು
ಅಪ್ಪನ ತ್ಯಾಗವ ಅರಿತವರಿಲ್ಲ
ಅಪ್ಪಗೆ ಆವರೇ ಸಾಟಿಯಲಾ

ರಝುಲೈಕತ್ ಅಶ್ರಿಯ
ಲ ಡಿ





# ಹಾರೈಕೆ

ಬೆಳಗಲೀ ಬೆಳಗಲೀ ನಮ್ಮ ನಾಡದೀಪ
ಮೊಳಗಲೀ ಮೊಳಗಲೀ ರಾಷ್ಟ್ರಗೀತೆಯು
ಪಂಪ ರನ್ನ ಜನ್ನರು ಬಾಳಿದ ದೇಶ
ಕೀರ್ತಿ ಪಥದಿ ಸಾಗುತಿಹುದು ನಮ್ಮ ದೇಶವು
ಪ್ರಪಂಚದಿ ಕೀರ್ತಿ ಪಡೆದ ದೇಶವೊಂದಿದೆ
ಅದುವೆ ನಮ್ಮ ಹೆಮ್ಮೆಯ ಭರತ ಖಂಡವು
ಉತ್ತರದಿ ಕಾಯುತಿಹರು ವೀರ ಯೋಧರು
ದೆಹಲಿಯಲಿ ಹಾರುತಿಹುದು ನಮ್ಮ ಧ್ವಜವು
ಎಲ್ಲೆಡೆಗಳಲಿ ಹರಿಯುತಿಹವು ಪುಣ್ಯ ನದಿಗಳು
ಪ್ರಕೃತಿಗೆ ಸೌಂದರ್ಯವ ತುಂಬುತಿರುವುವು
ಚಿರಕಾಲ ಬಾಳುತಿರಲಿ ನಮ್ಮ ದೇಶವು
ಇದುವೆ ನಮ್ಮ ತುಂಬು ಮನದ ಹಾರೈಕೆಯು



ಯುಕ್ತಾ

೬ನೇ ತರಗತಿ

# ತಾಯಿ

ಸಾಗುತಿದೆ ಪಯಾಣ
ಮಾಗಿದ ಜೀವನದ ಪಯಣ

ತುಂಬಿರುವ ನನ್ನ ಬಾಳಿನಲ್ಲೆ
ಅಮ್ಮ ನೀನೇ ನನಗೆಲ್ಲಾ
ನೀ ತೋರುವ  ಒಂದೊಂದು
ಹಾದಿ ನನಗೀಗ ಹೊನ್ನಹಾದಿ

ನಿನ್ನ ಪ್ರೀಯ ಕಡಲು ಎಂದು
ತೀಂದ ಕೊನೆಯಿಲ್ಲದ ಕಡಲು
ಆ ಕಡಲಲ್ಲಿ  ಈಜುವ ಮೀನು
ಮಾತ್ರ ನಾನಮ್ಮ
ಎಲ್ಲಾ ದು:ಖಗಳನ್ನು ಬಾಚುತ್ತಾ
ಮಕ್ಕಳ ಯಶಸ್ಸಿಗಾಗಿ ಕಷ್ಟಪಡುವ ತಾಯಿ
ನೀನೆ ನನ್ನ ದೇವರು



megha 8 c

# ಅಮ್ಮನ ಮಾತನ್ನು ಧಿಕ್ಕರಿಸಿದರೆ....

ಒಂದನೊಂದು ಕಾಡಿನಲ್ಲಿ ಒಂದು ಜಿಂಕೆ ಇತ್ತು. ಅದಕ್ಕೆ ಮರಿಗಳಿರಲಿಲ್ಲ. ಒಂದು ದಿವಸಜಿಂಕೆಯು ದೇವರಲ್ಲಿ ದೇವರೆ ನನಗೊಂದು ಪುತ್ರನನ್ನೋ ಪುತ್ರಿಯನ್ನೋ ಕೊಡಿ ಎಂದು ಬೇಡುತ್ತದೆ. ಅದರ ಪ್ರಾರ್ಥನೆ ಕೇಳಿದ ದೇವರು ಅವಳಿಗೆ ಒಂದು ಪುತ್ರನನ್ನು ವರವಾಗಿ ಕೊಟ್ಟರು. ಮಗು ಜಿಂಕೆ ಬೆಳೆಯುತ್ತ ಬಂತು. ಅವರು ಯಾವಾಗಲು ಒಟ್ಟಿಗೆ ಹೋಗಿ ಆಹಾರವನ್ನು ತರುತ್ತಿದ್ದರು.ಒಂದು ದಿವಸ ಅಮ್ಮ ಜಿಂಕೆಗೆ ಅಸೌಖ್ಯ ಉಂಟಾಯಿತು. ಮಗು ಜಿಂಕೆಗೆ ಬೇಸರ ಉಂಟಾಯಿತು.ಅವರಿಗೆ ಆಹಾರವು ಇಲ್ಲದಾಯಿತು. ಮಗು ಜಿಂಕೆಯು ಹೇಳಿತು‘ಅಮ್ಮ ನಾನು ಹೋಗಿ ಆಹಾರವನ್ನು ತರುತ್ತೇನೆ.’’ ಆಗ ಅಮ್ಮ ಜಿಂಕೆ ಹೇಳಿತು’’ ಬೇಡ ಮಗ ನೀನು ಆಹಾರ ತರಲು ಹೋಗಬೇಡ ,ಯಾಕೆಂದರೆ ಅಲ್ಲಿ ದೊಡ್ಡ ದೊಡ್ಡ ಮಾಂಸಹಾರಿ ಪ್ರಾಣಿಗಳಿವೆ ’’ಮಗು ಜಿಂಕೆ ಹೇಳಿತು ’’ಪರವಾಗಿಲ್ಲ ಅಮ್ಮ ನಾನು ಬೇಗ ಹೋಗಿ ಬರುತ್ತೇನೆ’’ಎಂದಿತು.ಆಗ ಅಮ್ಮ ಜಿಂಕೆ ಹೇಳಿತು ’’ಬೇಡ ಬೇಡ ಹೋಗ ಬೇಡ’’ ಮರುದಿನ ಅಮ್ಮ ಜಿಂಕೆಗೆ ಅಸೌಖ್ಯ ಹೆಚ್ಚಾಗುತ್ತಾ ಬಂತು. ಮಗು ಜಿಂಕೆಯು ತನ್ನ ತಾಯಿಗೆ ಆಹಾರ ಸಿಗದಿದ್ದರೆ ತನ್ನ ತಾಯಿ ಪ್ರಾಣ ಬಿಡಬಹುದು ಎಂದು ಭಾವಿಸಿ ಅಮ್ಮನ ಮಾತನ್ನು ಧಿಕ್ಕರಿಸಿ ಹೋಗುತ್ತಾನೆ.ಕಾಡಿನಲ್ಲಿ ಹಲವು ದೊಡ್ಡ ದೊಡ್ಡ ಮಾಂಸಹಾರಿ ಪ್ರಾಣಿಗಳ ಶಬ್ದ ಕೇಳುತ್ತಿತ್ತು .ಮಗು ಜಿಂಕೆಗೆ ಹೆದರಿಕೆಯಾಯಿತು.

ಆಗ ಅಲ್ಲಿ ಹುಲಿಯ ಶಬ್ದಕೇಳಿತು. ಫಕ್ಕನೆ ಹುಲಿ ಹಾರಿ ಬಂತು. ಮಗು ಜಿಂಕೆಗೆ ಹೆದರಿಕೆಯಾಯಿತು. ಅದು ಅದನ್ನು ಕಂಡು ಓಡಿತು. ಹುಲಿ ಬಂದು ಮಗು ಜಿಂಕೆಯನ್ನು ನುಂಗಿಬಿಟ್ಟಿತು. ಮಗುವನ್ನು ಕಾಣದೆ ತಾಯಿ ಹುಡುಕಿಕೊಂಡು ಹೋದಳು. ಆಗ ಅಲ್ಲಿ ಜಿಂಕೆಯನ್ನು ತಿಂದ ಹುಲಿಯನ್ನು ಕಂಡಿತು. ಹಾಗೂ ಅಲ್ಲಿ ರಕ್ತವು ಕಂಡಿತು . ಅಸೌಖ್ಯದಲ್ಲಿದ್ದ ಅಮ್ಮ ಜಿಂಕೆ ತುಂಬಾ ಅತ್ತಳು.




ಮೇಘ ಎಸ್. ಕೆ 9D

## ಹಾಲೆಂದು ನೋಡದೆ ಕದ್ದ ಕಳ್ಳ

ಒಂದಾನೊಂದು ಊರಿನಲ್ಲಿ ರಾಮ ಮತ್ತು ಸೋಮ ಇಬ್ಬರು ಇದ್ದರು.ರಾಮ ಶ್ರೀಮಂತಿಕೆಯಾಗಿದ್ದ.ಸೋಮ ಬಡವನಾಗಿದ್ದ. ಇವರಿಬ್ಬರಲ್ಲಿ ಏನೂ ವಿಷಯವಿದ್ದರೆ ಇಬ್ಬರು ಸೇರಿ ಚರ್ಚೆ ಮಾಡುತ್ತಿದ್ದರು.ಒಂದು ದಿವಸ ರಾಮ ಮತ್ತು ಸೋಮ ಪೇಟೆಗೆ ಹೋಗಿದ್ದರು.

ಆಗ ಅಲ್ಲಿ ಊರಿನಲ್ಲಿದ್ದ ಜನರು ಹೇಳುತ್ತಿದ್ದರು. ಅಲ್ಲಿ ರಾಜಪ್ಪ ಇದ್ದರಲ್ಲಅವರು ಶ್ರೀಮಂತಿಕೆಯಾದ್ದು ಹೇಗೆ ಗೊತ್ತೆ?ಆಗ ಮತ್ತೊಂದು ಜನ ಹೇಗೆ? ಅವರ ಮನೆಯಲ್ಲಿ ದನಗಳು ಇಲ್ಲವೆ ಆ ದನಗಳ ಹಾಲು ತೆಗೆದು ದೊಡ್ಡ ಮಡಿಕೆಯಲ್ಲಿ ತುಂಬಿಸಿ ಅದನ್ನು ಮಾರುತ್ತಾನೆ. ಯಾವಾಗಲೂ ಹೀಗೆ ಮಾಡಿ ಅವನ್ನು ಶ್ರೀಮಂತನಾಗಿದ್ದಾನೆ. ಆ ಒಂದು ಮಡಿಕೆ ನಮಗೆ ಸಿಕ್ಕಿದರೆ ಸುಲಭದಲ್ಲಿ ಜೀವಿಸಬಹುದು. ಈ ಮಾತುಗಳನ್ನು ಕೇಳಿದ ಸೋಮ ಶಿವರಾತ್ರಿಯ ದಿನವನ್ನು ಕಾಯುತ್ತಿದ್ದನ್ನು. ಯಾಕೆಂದರೆ ಶಿವರಾತ್ರಿಯ ದಿನದಂದು ಕದ್ದರೆ ಯಾರು ಬಯ್ಯಲ್ಲವಂದು ನಂಬಿಕೆಯಿಂದ ಆ ದಿನವನ್ನು ಕಾಯುತ್ತಿದ್ದ. ಕಾದು ಕಾದು ಆ ದಿನ ಮುಟ್ಟಿತು. ರಾತ್ರಿಯಾಗುವಾಗ ಅವನು ರಾಜಪ್ಪನ ಮನೆಗೆ ಹೋದ. ಅಲ್ಲಿ ಹೊರಗೆನೆ ಒಂದು ದೊಡ್ಡ ಕುಡಿಕೆ ಇತ್ತು. ಅದನ್ನು ನೋಡಿ ಸಂತೋಷಪಟ್ಟನು ಮೆಲ್ಲನೆ ಆ ಕುಡಿಕೆಯ ಹತ್ತಿರ ಹೋಗಿ ಆ ಕುಡಿಕೆಯನ್ನು ಅದರಲ್ಲಿ ಏನು ಎಂದು ನೋಡದೆ ಕಷ್ಟಪಟ್ಟು ಮನೆಗೆ ತಂದನು. ಒಂದು ಲೋಟೆ ತಂದುಮಡಿಕೆಯಿಂದ ತೆಗೆದು ಕುಡಿದನು.ಕುಡಿದಾಗ ಅದು ಹಾಲಲ್ಲ ಪಿನೋಯಿಲ್ ಎಂದು ರಾಮನಿಗೆ ತಿಳಿಯಿತು .ಅವನಿಗೆ ತುಂಬ ಬೇಸರ ವಾಯಿತು. ಅವನು ಈ ವಿಷಯವನ್ನು ಸೋಮನಲ್ಲಿ ಹೇಳಿದ. ಆಗ ಸೋಮ ಹೇಳಿದ. “ಬೆಳ್ಳಗಿರುವುದೆಲ್ಲ ಹಾಲಲ್ಲ’



megha s. k


9 D

# ಕೈಲಾಶ್ ಸತ್ಯಾರ್ಥಿ

ಕೈಲಾಶ್ ಸತ್ಯಾರ್ಥಿಯವರು ಜನವರಿ ೧೧ ೧೯೫೪ರಲ್ಲಿ ಮಧ್ಯಪ್ರದೇಶದಲ್ಲಿ ಜನಿಸಿದರು. ಅವರ ನಿಜವಾದ ಹೆಸರು ಕೈಲಾಶ್ ಶರ್ಮ ಎಂದಾಗಿದೆ. ತಂದೆಯ ಹೆಸರು ರಾಮ ಪ್ರಸಾದ್ ಶರ್ಮ ತಾಯಿಯ ಹೆಸರು ಚೀರುಂಜಿ ಎಂದಾಗಿದೆ.ಭಾರತದಲ್ಲಿ ಮಕ್ಕಳಅಭಿವೃದ್ಧಿಗಾಗಿ ದುಡಿದರು.ವಿದೇಶದಲ್ಲಿ ಹುಟ್ಟಿ ಬೆಳೆದ ಕೈಲಾಶ್ ಸತ್ಯಾರ್ಥಿ ಸರಕಾರಿ ಕಾಲೇಜಿನಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿಗಳಿಸಿ,ಪಿ ಜಿ ಡಿಪ್ಲೋಮಾ ಮಾಡಿ ಮುಗಿಸಿದರು. ಕೆಲಕಾಲ ಶಿಕ್ಷಕರಾಗಿಯೂ ದುಡಿದರು.ಕೈಲಾಶ್ ಸತ್ಯಾರ್ಥಿಯು ಕಳೆದ ೩೪ ವರ್ಷಗಳಿಂದಲೂ ಅತ್ಯಂತ ನಿಷ್ಠೆಯಿಂದ, ಸಂಪೂರ್ಣ ಸಮರ್ಪಣಾಭಾವದಿಂದ ಮಕ್ಕಳ ಹಕ್ಕುಗಳ ಹೋರಾಟಗಾರರಾಗಿ ದುಡಿಯುತ್ತಿದ್ದಾರೆ. ಸತ್ಯಾರ್ಥಿಗೆ ೨೦೧೪ರ ಸಾಲಿನ ನೋಬಲ್ ಶಾಂತಿಪ್ರಶಸ್ತಿ ದೊರೆತಿದೆ.ಇವರು ದೆಹಲಿಯಲ್ಲಿ 'ಬಚ್ಪನ್ ಬಚಾವೋ ಆಂದೋಲನ' ದ ಮೂಲಕ ಸುಮಾರು ೮೦ಸಾವಿರಕ್ಕೂ ಹೆಚ್ಚು ಬಾಲ ಕಾರ್ಮಿಕರ ಮುಕ್ತಿ ಮತ್ತು ಪುನರ್ವಸತಿಗೆ ದುಡಿಯುತ್ತಿದ್ದಾರೆ. ಆ ಮಕ್ಕಳಿಗೆ ಶಿಕ್ಷಣ ಉದ್ಯೋಗ ಒದಗಿಸಿ ಮಕ್ಕಳ ಜೀವನಕ್ಕೆ ಒಂದು ಭವಿಷ್ಯವನ್ನು ಕಲ್ಪಿಸಿದ್ದಾರೆ. ಇವರ 'ಬಚ್ಪನ್ ಬಚಾವೋ' ಆಂದೋಲನದ ಮಹತ್ವದ ಕೆಲಸವನ್ನು ಗಮನಿಸಿ ೨೦೧೪ರ ನೋಬಲ್ ಶಾಂತಿ ಪ್ರಶಸ್ತಿಯನ್ನು ಪಾಕಿಸ್ತಾನದ ಮಕ್ಕಳ ಹಕ್ಕುಗಳ ಹೋರಾಟಗಾರ್ತಿ ಮಲಾಲ ಯೂಸಫ್ ಝೂಯಿಯೊಂದಿಗೆ ನೀಡಲಾಗಿದೆ. ಸತ್ಯಾರ್ಥಿಯವರು ಈಗಲೂ ದೆಹಲಿಯಲ್ಲಿ ವಾಸಿಸುತ್ತಾರೆ.

ಅವರ ಪತ್ನಿ ಸುಮೇಧಾ. ಮಗಳು ಅಶ್ಮಿತ. ಎಕೊನಾಮಿಕ್ಸ್ ಸದಸ್ಯರಾಗಿದ್ದಾರೆ. ಸತ್ಯಾರ್ಥಿಯವರು ಮಗಳು ಎಕೊನಾಮಿಕ್ಸ್ ಪಧವೀಧರೆ. ತಂದೆಯವರ ಜೊತೆ ಕೆಲಸ ಮಾಡುತ್ತಿದ್ದರು .

ಮೇಘಾ ಎಸ್ ಕೆ, ೯ ಡಿ



# ಅನಾಥ

ರೈಲು ಹಳಿಯಲಿ ದು:ಖವ ಪಟ್ಟು
ಕುಳಿತಿದೆ ನೋಡಿ ಮಗುವೊಂದು
ಅನಾಥವಾಗಿದೆಯೆನಿಸುವ ಮಗುವು
ಮಾಲಿನ್ಯದ ನಡುವೆ ಕುಳಿತಿದೆ ನೋಡಿ
ಪ್ರೀತಿ ವಾತ್ಸಲ್ಯವ ತಿಳಿಯದೆಯೆ



ಒಬ್ಬಂಟಿಯಿಂದ ಏನೂ ತಿಳಿಯದೆ
ಕೊಳಕು ಬಟ್ಟೆಯ ಧರಿಸಿ
ಅತ್ತಿತ್ತ ಸುತ್ತಲು ನೋಡುತ್ತ
ಶೂನ್ಯಕೆ ದೃಷ್ಟಿಯ ಹರಿಸುತ್ತ
ಆಹಾರವಿಲ್ಲದೆ ನಲುಗುತ್ತ



ಎಷ್ಟೊಂದು ಬೇಸರವಿದೆ ಮೊಗದಲ್ಲಿ
ಎಷ್ಟೊಂದು ಕಷ್ಟವಿದೆ ಜೀವನದಿ
ಎಷ್ಟೊಂದು ಅಳುವಿದೆ ಕಣ್ಣಲ್ಲಿ
ಆದರೆ ಅದನ್ನು ಸಹಿಸಿ ಕುಳಿತಿದೆ
ನೋಡಿ ಅನಾಥ ಮಗುವೊಂದು

ಮೇಘ ಎಸ್. ಕೆ 9 ಡಿ

# ಪವಿತ್ರವಾದ ನೀರು

ಮಾನವನ ಜೀವನಕ್ಕೆ ಅತೀ ಮುಖ್ಯವಾದವುಗಳಲ್ಲಿ ಗಾಳಿಯ ನಂತರ ನೀರು ಅಮೂಲ್ಯ ವಾಗಿ ಮುಖ್ಯ .ನಮ್ಮ ಭೂತಾಯಿಗೆ ಸಮುದ್ರಗಳು ಸುತ್ತಿಕೊಂಡಿವೆ.ನೀರು, ಕೆರೆ, ಹೊಳೆಗಳು,ಬಾವಿ, ನದಿ,ಪ್ರಾಕೃತಿಕವಾಗಿ ಮಳೆಯಿಂದ ದೊರೆಯುತ್ತದೆ.ಗಿಡಮರಗಳೂ ಸಸ್ಯಗಳೂ ನೀರಿಲ್ಲದೆ ಬದುಕಲಾರವು . ಅವು ಪ್ರತಿದಿನವೂ ನೀರನ್ನು ಬಯಸುತ್ತವೆ.ಒಂದೆರಡು ದಿನ ನೀರುಣಿಸದಿದ್ದರೆ ಬಾಡಿ ಬಸವಳಿಯುತ್ತವೆ.ಮನುಷ್ಯನು ಆಹಾರವಿಲ್ಲದೆ ಹಲವು ದಿನಗಳನ್ನು ಕಳೆಯಬಹುದು. ಆದರೆ ನೀರಿಲ್ಲದೆ ಒಂದು ನಿಮಿಷವೂ ಕಳೆಯಲು ಸಾಧ್ಯವಿಲ್ಲ.ತಿಂದ ಆಹಾರ ಕರಗಿಸಿಕೊಳ್ಳಲು ನೀರು ಮುಖ್ಯ. ಅದೇ ರೀತಿಯಲ್ಲಿ ಸ್ವಚ್ಛತೆಗೆ ಮೂಲವಾದುದು ನೀರು .ಆದುದರಿಂದ ನೀರು ಬಹಳ ಪವಿತ್ರವಾದದು.

ಬಾವಿಗಳ ನೀರನ್ನು ನಮಗೆ ನೇರವಾಗಿ ಉಪಯೋಗಿಸಲು ಸಾಧ್ಯ.ಆದರೆ ಕೆರೆ,ಕೊಳ,ಸರೋವರಗಳ ನೀರನ್ನು ಶುದ್ಧೀಕರಿಸಿ ನಮಗೆ ಉಪಯೋಗಿಸಬಹುದು.ಸದಾ ನದಿಗಳೆಲ್ಲ ಹರಿಯುತ್ತಾ ಇರುತ್ತದೆ. ಶುದ್ಧವಾದ ,ಅಮೂಲ್ಯವಾದ ನೀರು ಹರಿಯುತ್ತದೆ .ನದಿಗಳು ಬೆಟ್ಟದಲ್ಲಿ ಹುಟ್ಟುತ್ತದೆ..ಅವು ಸಣ್ಣ ರೂಪದಲ್ಲಿ ಸಣ್ಣದಾದ ಕೆರೆ, ಕೊಳಗಳಲ್ಲಿ ಸೇರಿಕೊಂಡು ದೊಡ್ಡದಾದ ನದಿಯಾಗಿ ಹರಿಯುತ್ತವೆ. ಇವೆಲ್ಲವು ಭೂತಾಯಿಯನ್ನು ಎರಡು ಕಡೆಯಿಂದ ತಣಿಸಿ ಹಸಿರುಮಯವಾಗಿ ಮಾಡುತ್ತದೆ. ನದಿಯು ನಮಗೆ ಹಲವು ರೀತಿಯಲ್ಲಿ ,ತರದಲ್ಲಿ ಉಪಯೋಗಿಸುವುದರಿಂದಲೇ,ಬ್ರಹ್ಮ ಮುರಾರಿಯಾದ ಶಿವನು ತನ್ನ ಜಡೆಯಲ್ಲಿ ಧರಿಸುವುದರಿಂದಲೋ , ಜೀವಂತವಾಗಿರುವುದರಿಂದಲೋ ಜನತೆ ನದಿಯನ್ನು ಪೂಜಿಸುತ್ತಾರೆ. ಮಹಿಳೆಯರು ನದಿ ದೇವತೆಗೆ ಗಂಗಾರತಿ ಮಾಡುತ್ತಾರೆ.ಹರಿದ್ವಾರದಲ್ಲಿ ಗಂಗಾನದಿಗೆ ದೀಪಗಳಿಂದ ಗಂಗೆಗೆ ಆರತಿ ಎತ್ತಿ ಮತ್ತೆ ಆ ಆರತಿಯನ್ನು ನೀರಿನಲ್ಲಿ ತೇಲಿಬಿಡುತ್ತಾರೆ.ಆದುದರಿಂದ ಆ ಬೆಳಕುಗಳು ಗಂಗಾನದಿಯ ಸೌಂದರ್ಯವನ್ನು ಹೆಚ್ಚಿಸುತ್ತವೆ.



ನದಿಯಿಂದ ಕೇವಲ ನೀರು ಮಾತ್ರವಲ್ಲ ಉಪಯೋಗ ನೀರಿನಲ್ಲಿ ಅನೇಕ ಪ್ರಾಣಿಗಳು ಜೀವಿಸುತ್ತವೆ. ಸಾಧಾರಣವಾಗಿ ಮೀನುಗಳು ಕಾಣುತ್ತವೆ.ಮೀನುಗಾರಿಕೆಯು ಒಂದು ಉದ್ಯಮವಾಗಿದೆ.ಕೆಲವೊಂದು ಮೀನುಗಳಿಂದ ನಮ್ಮ ಆರೋಗ್ಯಕ್ಕೂ ಬೆಳವಣಿಗೆ ಇದೆ. ಹಾಗೂ ಕೆಲವೊಂದು ಮೀನುಗಳನ್ನು ಔಷಧಿಗೂ ಉಪಯೋಗಿಸುತ್ತಾರೆ.ಎತ್ತರದಿಂದ ಹರಿಯುವ ನೀರು ಹೆಚ್ಚಿನ ಶಕ್ತಿಯನ್ನು ಬಲಪಡಿಸಿದೆ.ಈ ನೀರಿನಲ್ಲಿ ಸ್ನಾನ ಮಾಡುವುದು ಬಹಳ ಸಂತೋಷದಾಯಕ ಹಾಗೂ ಆರೋಗ್ಯದಾಯಕ.

ಮಳೆಗಾಲದಲ್ಲಿ ಯಾತ್ರಿಕರೂ ತುಂಬಿ ಹರಿಯುವ ನದಿಗಳನ್ನು ನೋಡಲು ಬರುತ್ತಾರೆ. ಎಷ್ಟೋ ಮಂದಿ ಪೂಜೆ ಮಾಡಲು, ಆನಂದಿಸಲು ಗಂಗಾ ಪೂಜೆ ಮಾಡಲು ಬರುತ್ತಾರೆ .ಇದೇ ನದಿಗಳು ತುಂಬಿ ತುಳುಕಿ ಭೋರ್ಗರೆದು ಪ್ರವಾಹಕ್ಕೆ ಕಾರಣವಾಗುತ್ತದೆ .ಹೀಗೆ ನದಿಗಳು ತುಂಬಿ ತುಳುಕುವಾಗ ಆ ನೀರನೆಲ್ಲ ಸಂಗ್ರಹಿಸಲು ಅಣೆಕಟ್ಟುಗಳನ್ನು ಕಟ್ಟುತ್ತಾರೆ. ನದಿಗಳನ್ನು ಗಂಗಾ, ಯಮುನಾ, ಸಿಂಧು ,ಬ್ರಹ್ಮಪುತ್ರಾ ಗೋದಾವರಿ ,ಕಪಿಲ,ನರ್ಮದ, ಕಾವೇರಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ .ಆದರೆ ಹಲವು ರೀತಿಯಲ್ಲಿ ನದಿಯ ಹರಿಯುವಿಕೆಗೆ ತೊಂದರೆ ಉಂಟಾಗುತ್ತದೆ .ಆ ನದಿಗಳನ್ನುಸಂರಕ್ಷಿಸುವುದು ನಮ್ಮ ಕರ್ತವ್ಯ ಎಂಬ ವಿಷಯ ನಮ್ಮ ಮನದಲ್ಲಿ ಇದ್ದೇ ಇರಬೇಕು.

ನೀಷ್ಮಾ 9 ಸಿ



# ಮಹಾತ್ಮಾ ಗಾಂಧೀಜಿ


ಭಾರತಮಾತೆಯ ಸೇವೆಯ ಮಾಡಿದ
ವೀರಮರಣವನು ಪಡೆದ
ಭಾರತವನ್ನು ಬಿಡುಗಡೆಗೊಳಿಸಿದ
ಹುತಾತ್ಮನಾದನು ಮಹಾತ್ಮನೆನಿಸಿ

ಬ್ರಿಟಿಷರ ಅಹಂಕಾರವ ಮುರಿದೆ
ಭಾರತಾಂಬೆಯ ಕೀರ್ತಿಯ ಮೆರೆದೆ
ಸ್ವಾತಂತ್ರ್ಯವ ನೀಡಿ ಪುಣ್ಯವ ಪಡೆದೆ
ಮಹಾತ್ಮನೆಂಬ ಹೆಸರನು ಪಡೆದೆ



ವೀರಮರಣವನು ಪಡೆದವನೆ
ಪ್ರಾಣತ್ಯಾಗ ಮಾಡಿದ ಧೀರನೆ
ಬ್ರಿಟಿಷರನು ಸೋಲಿಸಿದವನೆ
ಭಾರತಾಂಬೆಯ ಹೆಮ್ಮೆಯ ಪುತ್ರನೆ

ಮರೆಯಲಾರೆವು ಎಂದಿಗೂ ನಿನ್ನನು
ನೀನು ನೀಡಿದ ಸೇವೆಯನು
ಮಾತೃಭೂಮಿಯ ಪುಣ್ಯ ಪುರುಷನೇ
ನೀನೆ ನಮ್ಮಯ ಬಾಪೂಜಿ



# ಮಾನವೀಯತೆಯ ಮರೆಯದಿರು

ಜಲದಿಂದಾಗುವ ಅಪಾಯವ ತಿಳಿಯದೆ
ಬಯಸದಿರು ಪ್ರಕೃತಿಗೆ ಕಡುಕ
ಪ್ರಕೃತಿಯ ಕೋಪವು ನಮಗೆ ಶಾಪವು
ತಿಳಿದು ಮಾಡದಿರು ಪ್ರಕೃತಿಗೆ ಕೆಡುಕ

ನಾಶ ನಷ್ಟಗಳ ಮಹಾ ಹೋಮವು
ನಡೆಯುವುದು ಪ್ರಕೃತಿಯು ಮುನಿದರೆ
ಪ್ರಕೃತಿಯ ಕೋಪವೆ ಪ್ರಕೃತಿವಿಕೋಪವು
ಜೀವರಾಶಿಗಳ ಅಂತ್ಯದ ಕಾಲವು



ನಾಶಹೊಂದುವ ಮನೆಗಳು ಎಷ್ಟು
ಲೆಕ್ಕಹಾಕಲು ಸಾಧ್ಯವೆ
ಕಣ್ಣೀರಿಡುವ ಕುಟುಂಬಗಳೆಷ್ಟು
ಲೆಕ್ಕ ತಿಳಿಯುವುದೆ ನಮಗೆ

ನೆರೆಯಿಂದಾದ ಹಾನಿಯಿಂದ
ಆಹಾರವಿಲ್ಲದೆ ವಸ್ತ್ರವಿಲ್ಲದೆ
ನೊಂದ ಜನರಿಗಾಗಿ ಸಹಾಯಮಾಡಿ
ಮಾನವೀಯತೆಯ ಮೆರೆಯೋಣ

ಮಾನವ ಜನ್ಮವೇ ಶ್ರೇಷ್ಠ ಜನ್ಮವು
ಎಂಬುವ ಸತ್ಯವ ತಿಳಿಯೋಣ
ನೊಂದ ಬೆಂದ ಜನರಿಗಾಗಿ



ಕರುಣೆಯ ಕಣ್ಣನು ತೆರೆಯೋಣ
ಪ್ರಕೃತಿಯ ಕೋಪಕೆ ಒಳಗಾದವರಲಿ
ನಾವು ಕೋಪವ ಮಾಡದೆ
ನೊಂದವರ ಕಣ್ಣೀರನು ಒರೆಸುತ
ಪರೋಪಕಾರವ ಮಾಡೋಣ
ಕಷ್ಟವೇ ಬರಲಿ ಸುಖವೇ ಇರಲಿ
ಎಲ್ಲರಿಗಾಗಿ ಬಯಸೋಣ
ಒಬ್ಬರ ಕಷ್ಟಕ್ಕೆ ಸ್ಪಂದಿಸದಿದ್ದರೆ
ಮಾನವನಾಗಿಯು ಫಲವೇನು
ಒಬ್ಬನ ಕಷ್ಟಕೆ ಮಾಡು ಸಹಾಯ
ಮಾಡುವ ದೇವರು ನಿನಗೆ ಸಹಾಯ
ನೆರೆಯಿಂದಾಗುವ ನಾಶನಷ್ಟಗಳ
ಎದುರಿಸುವ ನಾವೊಂದಾಗಿ
ಏನೇ ಆಗಲಿ, ಏನೇ ಬರಲಿ
ಮರೆಯಬೇಡ ಮಾನವೀಯತೆಯ
ಎಂದಿಗೂ ಒಂದಾಗಿರೋಣ
ನೆರೆಯೆ ಬರಲಿ ಏನೇ ಬರಲಿ
ಒಂದಾಗಿದ್ದರೆ ನಾವು ಸೋಲಿಸಲಾಗದು ಯಾರು
ಎಂಬುವ ಸತ್ಯವ ತಿಳಿಯೋಣ

ನೇಹ 9 ಬಿ



# ಅಮ್ಮ

ಅಮ್ಮ ಅಮ್ಮ ಪ್ರೀತಿಯ ಅಮ್ಮ
ನೀನೇ ನನ್ನ ಮೊದಲ ಗುರು
ಅಮ್ಮ ಅಮ್ಮ ಮುದ್ದಿನ ಅಮ್ಮ
ನೀನೇ ನನ್ನ ಜೀವ
ನೀನೇ ನನ್ನ ಭಾವ
ಅಮ್ಮ ಅಮ್ಮ ಮಮತೆಯ ಅಮ್ಮ
ಲಾಲಿಯ ಹಾಡಿದ ಅಮ್ಮ
ಮುದ್ದು ಮಾಡಿದ ಅಮ್ಮ
ಪ್ರೀತಿಯ ಕೊಟ್ಟ ನನ್ನಮ್ಮ
ಅಮ್ಮ ಅಮ್ಮ ಪ್ರೀತಿಯ
ನೀನೇ ನನ್ನ ಮೊದಲ ಗುರು



ಪ್ರಜ್ಞಾ ,8 ಸಿ



# ಅತಿ ವೃಷ್ಟಿ

ಅದೋ ಅದೋ ಬಂದಿತು ಭೋರ್ಗರೆಯುತ ಮಳೆ
ಕೊಚ್ಚಿತು ನೆಲ ಎಲ್ಲೆಲ್ಲಿಯು ಜಲ
ಉಕ್ಕಿತು ನೀರು ರಭಸದಿ ಹರಿಯಿತು
ತುಂಬಿ ತುಳುಕಿದವು ನದಿ ,ಕೆರೆ, ಹೊಳೆ
ಮನುಕುಲ ಬಳಲಿ ಬೆಂಡಾದರು
ಪ್ರಾಣಿ,ಪಕ್ಷಿಗಳು ಬೀಡಿಲ್ಲದೆ ಕೊರಗಿದವು
ಆದರೂ  ಕರುಣೆಯೆ ಇಲ್ಲದ ಮಳೆ
ಧುಮುಕಿದ ವೇಗಕೆ  ನಡುಗಿತು ಇಳೆ
ಪ್ರಕೃತಿ ಕೋಪಕ್ಕೆ ಆಯಿತು ವಿಕೋಪ
ಜನತೆಯ ಸಂಕಟ ನಡೆಯಲು ಸತತ
ಪ್ರಾರ್ಥನೆಗೈದರು ಪೂಜೆಯ ಮಾಡಿ
ತಣ್ಣಗಾಯಿತಿಳೆಯು
ಖುಷಿಯಲಿ ಜನರು ಹೊಸ ಬದುಕು
ಕಟ್ಟಲು ಉತ್ಸಾಹದಿ ನಿಂತರು
ನಮ್ಮಿಂದಾಗುವ ಸಹಾಯ ಮಾಡಿ
ಅವರ ಬದುಕಿಗೆ ನೆರವಾಗುವ



ಪ್ರಶಮ್ . ಪಿ
8 C

# ವಿಧಿಯ ಆಟ ದೇವರು ನಟ_

ಒಂದು ಊರಿನಲ್ಲಿ ಒಬ್ಬ ಶ್ರೀಮಂತ ಇದ್ದನು .ಅವನು ಯಾವಗಲು ಹಣದ ಮೇಲೆ ಮೆಚ್ಚುಗೆ ಪಡುತ್ತಿದ್ದ . ಒಬ್ಬ ನೌಕರನಿಗೆ ಅವನಂತೆ ಶ್ರೀಮಂತವಾಗಬೇಕು ಹಾಗೂ ಅವನಗೇ ನಾನು ಚಿನ್ನವನ್ನು ನೋಡಬೇಕು ಅವನಂತಹ ಅರಮನೆ ಕಟ್ಟಿಸಬೇಕು ಎಂದು ಚಿಕ್ಕದಿಂದಲೇ ಅವನ ಆಸೆ ಮತ್ತು ಕನಸು ಆಗಿತ್ತು .ಆದರೆ ಈ ನೌಕರನಿಗೆ ಮೂರು ಹೊತ್ತು ಉನ್ನಲು ಹಣವಿರಲಿಲ್ಲ . ಆದರೆ ಅವನು ಬೇರೆಯಾವರ ಗದ್ದೆಯಲ್ಲಿ ಕೆಲಸ ಮಾಡಿ ಅದರಲ್ಲಿ ಬಂದ ಹಣವನ್ನು ಆಹಾರಕ್ಕಾಗಿ ಉಪಯೋಗಿಸುತ್ತದ್ದ ಮರುದಿನ ಬೆಳ್ಳಗೆ ಅವನು ಗದ್ದೆಯಲ್ಲಿ ಹಾಗೆ ಮುಂದುವರಿಯುತ್ತಿದ್ದ .ಒಟ್ಟಿನಲ್ಲಿ ಅವನಿಗೆ ಹಣ ಸಿಕ್ಕಿದರೆ ಸಾಕು ಎಂದು ಮರುದಿನ ಬೆಳ್ಳಗೆ ಅವನು ಗದ್ದೆಗೆ ಹೋಗುತ್ತಿದ್ದ ಸಮಯದಲ್ಲಿ ಅವನು ನೌಕರನನ್ನು ಕಂಡು ಶ್ರೀಮಂತನು ನಿರ್ಲಕ್ಷ್ಯ ಮಾಡುತ್ತಾನೆ .ಆಹೊತ್ತಿನಲ್ಲಿ ಅವನು ತೆಗೆದು ಕೊಂಡ ವಿಚಾರವೆಂದರೆ ನಾನು ಕೂಡ ನಿನ್ನಂತಹ ಉಡುಪು,ಅರಮನೆ,ಚಿನ್ನ ಅವುಗಳನ್ನು ನಾನು ಕೂಡ ಮಾಡಬಹುದು .ದೇವರು ಹೇಗೆ ಆಟವಾಡಿಸುತ್ತಾನೆ ಹಾಗೆ ನಮ್ಮ ಜೀವನದಲ್ಲಿ ಕೂಡ ಹೊಸಹೊಸ ಅನುಭವಗಳು,ಕಹಿ ನೆನಪು,ಕಷ್ಟ,ದುಖ,ಸುಖಗಳು ಇದ್ದೆ ಇರುತ್ತದೆ .ಒಟ್ಟಿನಲ್ಲಿ ನನ್ನ ಬಾಲ್ಯದಲ್ಲಿ ಬಂದ ಕನಸನ್ನು ಕನಸನಂತೆಯೇ ಶ್ರೀಮಂಗನಾಗ ತೋರಿಸುತ್ತಾನೆ ಎಂದು ಹೇಳಿದ .ಆಗ ಶ್ರೀಮಂತನು ಮೂರ್ಖ ನಿನ್ನಿಂದ ಯಾವತ್ತು ಶ್ರೀಮಂತ ಬದುಕನ್ನು ಬದುಕಲು ಸಾಧ್ಯವಿಲ್ಲ ಎಂದು ಮುಂದೆ ಸಾಗುವನು ನೌಕರನು ಕೊಟ್ಟ ಮಾತನ್ನು ಯಾವತ್ತು ತಪ್ಪಿಸುವುದಿಲ್ಲ.ಶ್ರೀಮಂತನಿಗೆ ಕೊಟ್ಟ ಶರತ್ತುವನ್ನು ಕಾಪಾಡಲು ಅವನು ಕಷ್ಟವಾದ ತಪ್ಪಸ್ಸನ್ನು ಮಾಡುತ್ತಾನೆ .ಕೊನೆಗೊಮ್ಮೆ ದೇವರು ಪ್ರತ್ಯಕ್ಷವಾದನು ನಿನಗೆ ನನ್ನಿಂದ ಏನು ಬೇಕು ಎಂದು ಕೇಳಿದಾಗ ನೌಕರನಿಗೆ ನಾನು ಶ್ರೀಮಂತನಾಗಬೇಕು ಎಂದು ಹೇಳುತ್ತಾನೆ .ಆಗಲೆ ನಾಳೆ ನದಿಗಳಲ್ಲಿ ಸ್ನಾನಮಾಡು ನಾನು ಹೆಂಗಸಿನ ರೂಪದಲ್ಲಿ ಬಿಕ್ಷುಕಿಯಾಗಿ ನಿನ್ನ ಮುಂದೆ ಬರುತ್ತೇನೆ ಆಗ ನಿನ್ನ ಮುಂದೆ ಬರುತ್ತೇನೆ ಆಗ ನೀನು ಅವಳಿಗೆ ಅನ್ನ ಹಾಕು ಆಗ ಅವಳು ಚಿನ್ನವಾಗಿ ಬದಲಾಗುತ್ತಾಳೆ ಎಂದು ಹೇಳಿದ ಕೂಡಲೇ ಮಾಯವಾಗಿ ಹೋದರು .ದೇವರು ಹೇಳಿದಂತೆಯೇ ಮಾಡಿದಾಗ ಅವನು ಶ್ರೀಮಂತನಾಗಿ ಬದಲಾದನು .



# ಅಪ್ಪ

ಅಪ್ಪ ನಿನ್ನಂತೆ ಯಾರು ಇಲ್ಲ  ಈ ಜಗದಲಿ

ನೀನೇ ಬೇಕು ಎಲ್ಲ ಯುಗ ಯುಗದಲಿ

ಅಪ್ಪ ನಿನನ್ನೇ ನೆನೆದಿರುವೆ  ಮನದಲಿ

ನನಗೆ ಭಾಗ್ಯವಿದ್ದರೆ ನೀನೇ ಅಪ್ಪನಾಗು ಇನ್ನೊಂದು ಜನುಮದಲಿ

ನೀನೇ ನನ್ನ ದೇವರು ಮರೆಯದಿರಲಿ

ನೀವೆಂದಿಗೂ ನನ್ನವರು ನೆನಪಿರಲಿ

ನಿನ್ನಂತೆ ಯಾರು ಇಲ್ಲ ಈ ಜಗದಲಿ ..........





*ರಿಶಾ ಶೆಟ್ಟಿ*



# ಮಾಯಾ ನದಿ

ಒಂದು ಊರಿನ ಬೆಟ್ಟದಲ್ಲಿ ಒಂದು ಮಾಯಾ ನದಿ ಇತ್ತು. ಆ ನದಿಯು ಎಲ್ಲದಕ್ಕೂ ಜೀವ ಕೊಡುತಿತ್ತು .ನದಿಯ ಹತ್ತಿರದಲ್ಲಿದ್ದ ಕಲ್ಲುಗಳು ಉರುಳಿ, ಮರಗಳ ಕೊಂಬೆ , ರೆಂಬೆ ,ಎಲೆಗಳು ಉದುರಿ ಬೀಳುತ್ತಿದ್ದುವು. ಅವುಗಳೆಲ್ಲವು ನದಿಗೆ ಬಿದ್ದ ತಕ್ಷಣವೇ ಸುಂದರವಾದ ಮೀನುಗಳಾಗಿ ನದಿಯಲ್ಲಿ ಬದುಕುತ್ತಿದ್ದವು . ನದಿಯ ಪಕ್ಕದಲ್ಲಿ ಒಂದು ಊರಿತ್ತು.ಆ ಊರಿನ ಜನರೆಲ್ಲರು ಆಚೆ ಈಚೆ ಹೋಗಬೇಕಾದರೆ ವಾಹನಗಳನ್ನು ಬಳಸುತ್ತಿದ್ದರು. ಹೀಗೆ ಮುಂದುವರಿದರೆ ಮುಂದೆ ಏನಾಗಬಹುದು ಎಂದು ಯಾರಿಗೂ ಗೊತ್ತಾಗಲಿಲ್ಲ. ಒಂದು ದಿನ ಕೊಳಕಾದ ಕಪ್ಪು ಮೋಡ ಒಂದು ಆಸಿಡ್ಡನ್ನು ಉಗುಳುತ್ತಿತು. ಮಾಯಾ ನದಿಯ ನೀರು ಕೊಳಕಾಯಿತು. ಮೆಲ್ಲ ಮೆಲ್ಲನೇ ಪ್ರಕೃತಿಯು ನಾಶವಾಗುತ್ತಾ ಹೋಯಿತು. ಮಾಯಾ ನದಿಗೆ ಭಯ ಶುರುವಾಗಿ ಕಾಡಿನಲ್ಲಿದ್ದ ಪ್ರಾಣಿ ಪಕ್ಷಿಗಳನ್ನು ಕರೆಯಿತು . ''ಮುಂದೆ ಏನು ಮಾಡುವುದು ? ಪ್ರಾಣಿಗಳೇ, ನೀವು ನನಗೆ ಒಂದು ಸಹಾಯ ಮಾಡಬೇಕು;ಎಲ್ಲರೂ ಊರಿಗೆ ಹೋಗಿ ಊರಿನ ಜನರಿಗೆ ಅವರು ಉಪಯೋಗಿಸುವ ವಾಹನದಿಂದಾಗಿ ಹೀಗೆ ಆಗಿದೆ.ಎಂದು ತಿಳಿಸಿರಿ'' ಎಂದು ನದಿ ಪ್ರಾಣಿ ಪಕ್ಷಿಗಳಲ್ಲಿ ಹೇಳಿತು.

ಪ್ರಾಣಿಗಳೆಲ್ಲವು ಹೋಗಿ ತಿಳಿಸಿದವು . ಒಳ್ಳೆಯವರಾದ ಊರಿನ ಜನರು ಇದರ ಬಗ್ಗೆ ಯೋಚನೆ ಮಾಡಿ ಇನ್ನು ಮುಂದೆ ವಾಹನವನ್ನು ಮಿತವಾಗಿ ಬಳಸಬೇಕೆಂದು ನಿರ್ಧಾರವನ್ನು ಮಾಡುತ್ತಾರೆ. ಇನ್ನು ಮುಂದೆ ವಾಹನವನ್ನು ಹೆಚ್ಚು ಹೆಚ್ಚು ಬಳಸಿದರೆ ಪ್ರಕೃತಿ ನಾಶವಾಗಬಹುದು. ಪ್ರಕೃತಿ ನಾಶವಾದರೆ ನಾವು ನಾಶವಾಗುತ್ತೇವೆ ಎಂದು ಊರಿನಲ್ಲಿ ಹೇಳುತ್ತಾರೆ.ಎಲ್ಲರೂ ಅವರು ತೀರ್ಮಾನಿಸಿದ ಪ್ರಕಾರ ವಾಹನಗಳ ಉಪಯೋಗವನ್ನು ತೀರಾ ಕಡಿಮೆಗೊಳಿಸಿದರು. ಹಾಗಾಗಿ ಕೊಳಕಾದ ಕಪ್ಪು ಮೋಡ ಮೆಲ್ಲ ಮೆಲ್ಲನೇ ಕಡಿಮೆಯಾಗುತ್ತಾ ಹೋಯಿತು. ಪ್ರಕೃತಿಯ ಗಿಡಮರಗಳೆಲ್ಲ ಮತ್ತೆ ಹಚ್ಚಹಸುರಾಗಿ ಕಂಗೊಳಿಸತೊಡಗಿದವು. ಮಾಯಾ ನದಿಯು ಕೊಳಕು ನೀರಿನಿಂದ ಮುಕ್ತವಾಗಿ ಕನ್ನಡಿಯಂತೆ ಹೊಳೆಯುತೊಡಗಿತು. ಅದು ಪುನಃ ವಿವಿಧ ಜಲಚರಗಳಿಂದ ತುಂಬಿಕೊಂಡಿತು.



ಅನನ್ಯಾ ೧೦ ಸಿ ತರಗತಿ

# निमित्तमात्रम्


पाण्डवकौरवयोः युद्धम् प्रवर्तमानम् आसीत् । रणरंगे आसीत् अर्जुनः । प्रतिपक्षे आसीत् कर्णः । तयोः युद्धम् आरब्धम् । तयोःदृष्टुम् आकाशे देवाःपंक्तिशः स्थितवंतःअर्जुनस्य बाणेन आहतः कर्णस्स स्यः कम्पमानःसन् त्रिंशदधिकपादपरिमितं पृष्ठतःअसरत् ।ये पश्यन्तःआसन् ते सर्वे अर्जुनस्य शौर्य दृष्टवा मूकविस्मिताः अभवन् ।

कर्णस्य शौर्यमपि अर्जुनस्य शौर्यात् न्यूनं तु न आसीत् । कर्णस्य बाणस्य आघातेन कम्पमानः अर्जुनस्य रथः त्रिचतुरपादपरिमितं पृष्ठतः असरत् । तदा कृष्णः एव कर्णस्य शौर्य श्लाघितवान् । परन्तु कदाचिदपि कृष्णेन अर्जुनस्य शौर्यं न श्लाघितम् । एतत् अर्जुनेन अपि लक्ष्यितम् आसीत् । दिनान्ते विच्छायमुखः अर्जुनः कृष्णम् अपृच्छत् कृष्ण, मम बाणेन आहतः कर्णस्स स्यः कम्पमानः पक्षी इव सुदूरं पृष्ठतःअसरत् ।अनेकवारम् एवं जातम् । किन्तु भवता मम कौशल्यस्य श्लाघनं न कदाचिदपि कृतम् । कर्णेन प्रहतः मम रथः किञ्चिदेव यदा व्यचलत् तदा भवता भृशं तस्य शौर्य श्लाघितम् । किमर्थम् एवम्

तदा रम्यमानः कृष्णः अवदत् " अर्जुना, तव रथस्य ऊर्ध्व भागे हनुमान् अस्ति । सः तं भागं रक्षति । अग्रभागःतव सारथिना मया रक्ष्यते । एवं स्थिते अपि कर्णस्य बाणेन आहतः तव रथः न केवलमं कम्पितः, अपि तु त्रिचतुरपादपरिमितं पृष्ठतः असरत् अपि! कर्णस्य रथस्य रक्षकः तु सः एकः एव । तयापि महत् शैर्यं दशितिं तेन । "

पश्चात् अर्जुनः स्यात् अवतरणं कृतवान् । अर्जुनस्य अवतरणस्य अनन्तरं कृष्णः रथात् अवतीर्णः । यदा कृष्णः अधः आगतवान् तदा रथः भस्मीभूतः! ! अस्मिन् समये कृष्णेन उक्तम् अर्जुन, एतत् त्वया अविदितंस्यात् । तव रथः कर्णेन ध्वंसितःआसीत् पूर्वमेव । एतावतपर्यंतम् अहम् एव तस्य रक्षणं कुर्वन् ,अहं साधितवान् इति अहम्भावः न प्रदर्शनीयः । सर्वदा साधनायाः सहायकाः कारणानि च भवन्ति अनेके । गर्वम् अहम्भावं च त्यक्त्वा अस्माभिः कार्याणि करणीयम् ।

रक्षिता जेअष्टमी कक्ष्या



# परकृति सौंदर्यम्



स्वदताम् वयम् स्वदताम्
प्रकृति सौंदर्यम् स्वदताम्
केका नृत्यति थै थक थै
कोकिलः गायति कुहू कुहू
हरिणो धावति अति शीघ्रं
लंघति वानर अतिमोदं
निर्मल सलिलं पश्यतु तत्र
सुंदर पुष्वाणि विकसन्ति
जम्बू पनसम् कदलीफलानि
आम्रम्, चूतम् दाळिंबम्
दण्डकारण्यं पश्यतु अत्र
सुंदर वृक्षम् पल्लव
मरीचम् मधुकर्कटी पटेलः
सूरणम् गोस्तनि अलाबुः

वैष्णवी
अष्टमी कक्ष्या



## Advantage of Demonetisation

On 8 November 2016 our honourable Prime minister of India Mr.Narendra Modi with a surprise move announced the implementation of demonetisation with the effect from midnight of that day itself .The government reasoned this unexpected and sudden move,even thought it caused the problem to the country's an effective countermeasure to rampant corruption and the penetration of black money in to our economy.

The demonetisation policy means the discontinuity of the particular currency which is circulating and replacing it with a new currency in present context it is the banning of five hundred(500) and thousand rupees notes.



## ಗೆಳತನ

ಅತೀ ಸುಂದರ ನಮ್ಮ ಗೆಳತನ
ಅದನ್ನು ಹೊಗಳಲು ಪದಗಳೇ ಇಲ್ಲ ನನ್ನ ಮನ
ಜೀವನದ ಕ್ಷಣಕ್ಷಣದ ಮಾತಲ್ಲಿ ಜೊತೆಯಾದವಳು ನನ್ನ ಗೆಳತಿ
ನೀಡಿದೆ ಬಾಳಿಗೆ ಅತೀ ಮಧುರ ಪ್ರಣತಿ



ಮಳೆಯಲ್ಲಿ ಜೊತೆಯಾಗಿ ಕೊಡೆ ಹಿಡಿದೇನೀ
ಸುಖವಿರಲಿ ದು:ಖವಿರಲಿ ನನ್ನೊಡನೆ ನಗುವೆನೀ
ನನ್ನ ಜೊತೆ ನನ್ನ ನೆರಳಾಗಿ ಬೆರತವಳೇನೀ
ನೀಡಿದೆ ಬಾಳಿಗೆ ಅತೀ ಪ್ರೀತಿಯನು ನೀ

ಹೇಳು ಗೆಳತಿ ಹೇಗೆ ಮರೆತು ಬಿಡಲಿ ನಿನ್ನ
ನೀ ನನ್ನ ಜೀವನದ ಚಿನ್ನ
ಬಿಡಬೇಡ ನೀನೆಂದು ನನ್ನ
ಅತೀ ಅಮರವಾಗಲಿ ನಮ್ಮ ಗೆಳೆತನ



shilpa 8 C

## ನವ ಕೇರಳ ನಿರ್ಮಾಣ



ನವ ಕೇರಳ ನಿರ್ಮಾಣ ಮಾಡೋಣ
ಎಲ್ಲರೂ ಒಟ್ಟಿಗೆ ಸೇರೋಣ
ಎಲ್ಲರೂ ಮಾಡೋಣ ಪ್ರಮಾಣ
ಮಾಡುವುದಿಲ್ಲ ಪ್ರಕೃತಿಗೆ ಅವಮಾನ
ಮರ ಗಿಡವೆಲ್ಲ ಕಡಿದು
ಎಲ್ಲವೂ ಹೋಯಿತು ಮಡಿದು
ತಪ್ಪಿಗೆ ಪಶ್ಚಾತ್ತಾಪ ಪಡುತ
ಎಲ್ಲರೂ ಸಾಗೋಣ ಒಟ್ಟಿಗೆ ನಡೆದು
ಪ್ರಕೃತಿ ನೀ ಕೊಟ್ಟ ಕಾಟ
ಆಗಿದೆ ಮನುಜನಿಗೆ ಪಾಠ
ನಿನ್ನ ಕೋಪ ತಿಳಿಯದೆ ನಾವು
ಸುಮ್ಮನೆ ತಂದುಕೊಂಡೆವು ಸಾವು
ಬಿಡುವ ಇನ್ನು ಅಹಂಕಾರ
ಆಗುವ ಮುಂದೆ ಉದ್ಧಾರ
ಈ ಪಾಠವ ಮರೆಯದೆ ಮನುಜ
ಸಾಗಿಸಿ ಮುಂದೆ ಜೀವನ
ಭಾರತಾಂಬೆಯ ಮಕ್ಕಳಾದ ನಾವೆಲ್ಲ

ತಾಯಿಯ ರಕ್ಷಣೆ ಮಾಡೋಣ

ಆಗಲಿ ಕೇರಳ ಅಭಿವೃದ್ಧಿ

ನೀವೂ ನೀಡಿ ಸಹಾಯನಿಧಿ

ಸುಂದರ ಕೇರಳ ನಿರ್ಮಾಣ ಮಾಡಿ

ನೋಡಲಿ ಎಲ್ಲರೂ ಬೆರಗು ಮೂಡಿ

ಎಲ್ಲರೂ ಒಟ್ಟಿಗೆ ಸೇರೋಣ

ನವಕೇರಳ ನಿರ್ಮಾಣ ಮಾಡೋಣ

ಸಿಂಚನ, 9 ಬಿ



# A DAY IN OFFICE

One day I woke up at 8:40 am. It was my 1st day in office. The Boss had said not to be late and to be reach before 9:30 am .When I woke up I got shocked by seeing the time .I started to shoot.

To my sister, she didn’t speak a single word and she went silently in to the kitchen. I got up and did all my home activities. I got ready. It was just 9 am .I went towards my bike but i find my bike is not there.My sister was standing in the door so I asked with her about my bike. She said that “you have given it to your friend Ram yesterday itself. Then I remembered . She was laughing at me . But I didn't shout at her . Because I was already late. I ran and ran there I saw an auto. I thought to go by auto but I felt little worried because Inever traveled lonly by auto .But I din't had any other option. So I sat in it . Auto driver dropped me I paied the fair and I saw that office gate is closed. A watch man was sitting there. I thought I came so fast. I felt very happy , but the time was 9:45am . The watchman looked me. I went near him and asked why this gate is closed & now its only 9:45 .

The watchman said because today is Sunday and on Sunday office will be closed and by seeing you I thought that you came for work . I replied Yes I am. But I never thought that today is Sunday .The watch man started laughing at me. I silently went from there but even I couldn't stop laughing at myself . It was the funniest day I ever had .

Sneha. M . shetty 8.c

# ಒಗಟುಗಳು

1 ) ಆರು ತಿಂಗಳಿಗೊಂದು ಬೆಳೆ
ಮೂರು ತಿಂಗಳಿಗೊಂದು ಬೆಳೆ
ದಿನೊಪ್ಪತ್ತಿಗೆ ಬರುವುದೊಂದು ಬೆಳೆ
ಮೂವತ್ತೆರಡು ಕಟ್ಟೆ ಅರುದ್ರೆ
ಎಲ್ಲ ಕೆಂಪು ಧಾನ್ಯವಾಗುತ್ತೆ
ಉತ್ತರ:ಎಲೆ ಅಡಿಕೆ ಸಣ್ಣ

2 ) ಕಚ್ಚಿದರೆ ಕಚ್ಚುವುದು
ಕಚ್ಚಲ್ಲ ಹಾವಲ್ಲ ಚೇಳಲ್ಲ
ಉತ್ತರ:ಮೆಣಸಿನ ಕಾಯಿ

3 ) ಚಿಪ್ಪುಂಟು ಆಮೆಯಲ್ಲ
ಜುಟ್ಟುಂಟು ಪೂಜಾರಿಯಲ್ಲ
ಮೂರು ಕಣ್ಣುಂಟು ಹರನಲ್ಲ
ಹಾಗಾದರೆ ನಾನು ಯಾರು ?
ಉತ್ತರ:ತೆಂಗಿನಕಾಯಿ

4 )ಹಿಡಿದರೆ ಹಿಡಿಕೆ ಆಗುತ್ತೆ
ಬಿಟ್ಟರೆ ಝುಲ್ ಅಂತದೆ
ಪಕ್ಷಿ ತರತ್ತೆ ತಾನು ತಿನ್ನತ್ತೆ
ತನ್ನ ಒಡೆಯನಿಗೂ ಕೊಡತ್ತೆ
ಉತ್ತರ:ಬಲೆ

5 )ಹೋದರೂ ಬರತ್ತೆ
ಮೇದರೂ ಬರತ್ತೆ



ಉತ್ತರ:ನೆನಪು

6 )ಕೈಯ ನುಂಗುವ ಇವನಿಗೆ
ತಲೆಯ ಮೇಲೆ ಬಾಲ
ಎದೆಯ ಮೇಲೆ ಕಣ್ಣು
ಬಾಗಿಲು ಕಾಯುವ ಬಂಟ
ಯಾರೀ ನಂಟ ?
ಉತ್ತರ:ಬೀಗ

7 )ಮುಂಗೈಲಿ ಪಳಪಳ ಅಂಗೈಲಿ ಥಳಥಳ
ಉತ್ತರ:ಬಳೆ, ಉಂಗುರ

8 )ಹಲ್ಲುಂಟು ಮೃಗವಲ್ಲ; ಸೊಲ್ಲುಂಟು ಸೂಜಿಗನಲ್ಲ
ಕೊಲ್ಲುವುದು ತನ್ನ ನಂಬಿದವರ
ಬಲ್ಲವರು ಹೇಳಿ ಸರ್ವಜ್ಞ
ಉತ್ತರ:ಗರಗಸ



9 )ಗರಿಕೆ ಆಸೆ ದೇವರು
ವರ್ಷಕೊಮ್ಮೆ ಬರ್ತಾನೆ
ಉತ್ತರ:ಗಣಪತಿ

10 )ಎತ್ತಲಾರದ ಬಾಲ ಸುತ್ತ ನೋಡಿದರೂ ಕಣ್ಣು
ಹುತ್ತದ ಹುಳ ತಿಂದು ಜೀವಿಸುವುದು
ಉತ್ತರ:ನವಿಲು

11 )ಏರಿ ಕೆಳಗೆ ಎಳಗಲ ಜಾಲ ಬೀಸುತ್ತದೆ
ಉತ್ತರ:ಭತ್ತ

ಸಂಗ್ರಹ:ಕಿಶನ್ 7 ತರಗತಿ

# ಗೆಳೆಯ ದೇಶಗಳ ಸಹಾಯ

ಒಂದಾನೊಂದು ಕಾಲದಲ್ಲಿ ಒಂದು ದೇಶವಿತ್ತು.ಸಮೃದ್ಧಿಯಿಂದ ಕೂಡಿದ ಆ ದೇಶದ ಹೆಸರು ಸಮೃದ್ಧಿ ದೇಶ.ಆದರೆ ಅವರ ಶ್ರಮವೆಲ್ಲಾ ವಿಫಲವಾಗುತಿದ್ದವು.ಯಾಕೆಂದರೆ ಅಸ್ತ್ರಶಸ್ತ್ರ ವಿದ್ಯೆಗಳಲ್ಲಿ ದೇಶದ ಸೇನೆಯು ಅಗ್ರಗಣ್ಯವಾಗಿದ್ದಿತು.ಒಂದು ದಿನ ನೆರೆಯ ದೇಶವು ಸಮೃದ್ಧಿ ದೇಶವನ್ನು ಆಕ್ರಮಿಸಲು ಒಂದು ಯೋಜನೆ ತಯಾರಿಸಿತು.ಸಮೃದ್ಧಿ ದೇಶಕ್ಕೆ ಆಕ್ರಮಿಸಲು ಬೇರೆ ದೇಶಗಳು ಬರುತ್ತಾರೆ ಎಂದು ಸೂಚನೆ ಸಿಕ್ಕಿತು. ತಿಳಿದ ತಕ್ಷಣ ರಾಜ ತನ್ನ ಗೆಳೆಯ ರಾಜ್ಯಗಳಾದ ವಿಜಯಪುರ, ಉದಯಪುರ, ದಕ್ಷಿಣಪುರ ರಾಜ್ಯಗಳಿಗೆ ತಮ್ಮ ದೇಶದ ಅರ್ಧ ಸೈನಿಕರನ್ನು ತಮಗೆ ನೀಡಬೇಕೆಂಬ ಸಂದೇಶವನ್ನು ಕಳುಹಿಸಿದನು. ಸಂದೇಶ ಸಿಕ್ಕಿದ ಕೂಡಲೇ ದೇಶದ ರಾಜರು ಅರ್ಧ ಸೈನಿಕರನ್ನು ಕಳುಹಿಸಿದರು.ನಂತರ ಸಮೃದ್ಧಿ ದೇಶದ ಸೇನೆ ರಾಜನ ಗೆಳೆಯ ದೇಶದ ಸೇನೆ ಸೇರಿದಾಗ ಶತ್ರು ದೇಶದ ಸೇನೆಗಿಂತ ಹೆಚ್ಚಾಯಿತು.ಮಹಾಯುದ್ಧ ತೊಡಗಿತು. ಯುದ್ಧಕಣದಲ್ಲಿ ಹಲವಾರು ಸೈನಿಕರು ಮರಣ ಹೊಂದ್ದಿದರು.ಮತ್ತು ಕೆಲವರು ಕಾಲು ಇಲ್ಲದೆ ತಮ್ಮ ದೇಹದ ಅಲ್ಲಲ್ಲಿ ಗಾಯವಾಗಿ ತಮ್ಮ ಅಂತಿಮ ಶ್ವಾಸ ತೆಗೆಯುತ್ತಿದ್ದರು. ನಂತರ ಶತ್ರು ದೇಶದ ಎಲ್ಲಾ ಸೈನಿಕರು ಮರಣ ಹೊಂದಿದರು.ಇದರಿಂದಾಗಿ ಶತ್ರು ದೇಶದ ರಾಜನಿಗೆ ಪ್ರೀತಿ ಇದ್ದರೆ ಅಸಂಭವವನ್ನು ಸಂಭವ ಮಾಡಬಹುದು ಎಂದು ತಿಳಿಯಿತು. ಶತ್ರು ದೇಶದ ರಾಜನು ಸಮೃದ್ಧಿ ದೇಶದ ರಾಜನಲ್ಲಿ ಕ್ಷಮೆ ಕೇಳಿದನು.ನಂತರ ಶತ್ರು ದೇಶವು ಮಿತ್ರದೇಶವಾಯಿತು.ಈ ಗೆಳೆಯರ ಪ್ರೀತಿ ಸದಾಕಾಲ ಮುಂದುವರಿಯಿತು.

**‘ ಪ್ರೀತಿ ಇದ್ದರೆ ಏನನ್ನೂ ಮಾಡಬಹುದು’**

ಪ್ರೀಜೇಶ ಲ



# ಬಿ . ಆರ್. ಅಂಬೇಡ್ಕರ್



ಭೀಮರಾವ್ ರಾಮಜೀ ಅಂಬೇಡ್ಕರ ಅವರು ಮಹಾರಾಷ್ಟ್ರದ ಅಂಬೆವಾಡೇ ಎಂಬ ಗ್ರಾಮದಲ್ಲಿ ಜನಿಸಿದರು. ಅವರು ಮಹಾರ್ [ ಹೊಲೆಯ] ಮನೆತನವೊಂದಕ್ಕೆ ಸೇರಿದವರು. ಬಡೋದೆಯ ಮಹಾರಾಜರು ಅವರಿಗೆ ಶಿಷ್ಯವೇತನ ನೀಡಿ ವಿಧ್ಯಾಭ್ಯಾಸಕ್ಕಾಗಿ ಇಂಗ್ಲಂಡಿಗೆ ಕಳಿಸಿದರು ಭೀಮರಾವ್ ಅವರು ಇಂಗ್ಲ ಡಿನಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದರಲ್ಲದೆ,ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಸೇರಿದರು. ನಂತರ ಮುಂಬೈಯಲ್ಲಿ ವಕೀಲಿವೃತ್ತಿ ಕೈಗೊಂಡು,ಅಸ್ಪೃಶ್ಯರ ನಾಯಕರಾಗಿ ಸಾರ್ವಜನಿಕ ಸೇವಾವೃತ್ತಿಯನ್ನು ಕೈಗೊಂಡು, ಕೆಲದಿನ ಮುಂಬೈಯ ' ಲಾ 'ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ,ನಂತರ ಅದರ ಪ್ರಿನ್ಸಿಪಾಲರಾಗಿಯೂ ಕೆಲಸ ಮಾಡಿದರು, ೧೯೨೬ ರಿಂದ ೧೯೩೪ ರವರೆಗೆ ಮುಂಬೈಯ ವಿಧಾನಸಭಾ ಸದಸ್ಯರಾಗಿದ್ದರು. ಲಂಡನ್ ದಲ್ಲೆ ನಡೆದ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದರು. ೧೯೪೨ರಲ್ಲಿ ವೈಸರಾಯ್ ರವರ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರಾಗಿ ಕಾನೂನು ಖಾತೆಯ ಕಾರ್ಯಭಾರವನ್ನು ನಿರ್ವಹಿಸಿದರು.

ದಲಿತರ ಮೇಲೆ ಆ ಕಾಲಕ್ಕೆ ನಡೆಯುತ್ತಿದ್ದ ಅನ್ಯಾಯ ,ದೌರ್ಜನ್ಯಗಳನ್ನು ಕಂಡುಂಡು ದಲಿತರಿಗೆ ನ್ಯಾಯವನ್ನು ದೊರಕಿಸಿಕೊಡಲು ಭೀಷ್ಮ ಪ್ರತಿಜ್ಞೆ ಮಾಡಿದರು . ಭಾರತೀಯ ಗಣತಂತ್ರದ ಸಂವಿಧಾನವನ್ನು ರಚಿಸಲು ನೇಮಕಗೊಂಡರು. ಕರಡು ಸಂವಿಧಾನ ಸಮಿತಿಯ ಅಧ್ಯಕ್ಷರಾಗಿ ಸಂವಿಧಾನವನ್ನು ಅಂಬೇಡ್ಕರ್ ಅವರ ನಿಷ್ಠೆಯಿಂದ ಮಹತ್ವಪೂರ್ಣ ಸೇವೆಯನ್ನು ಸಲ್ಲಿಸಿದರು. ದಲಿತರಿಗೆ ನ್ಯಾಯವನ್ನು ದೊರಕಿಸಿಕೊಡಲು ಅಂಬೇಡ್ಕರ್ ಅಹೋರಾತ್ರಿ ಹೋರಾಡಿದರು. ಸ್ವಾತಂತ್ರ್ಯ ಭಾರತದಲ್ಲಿ ಅವರು ಮೊಟ್ಟ ಮೊದಲನೆಯ ಕಾನೂನು ಮಂತ್ರಿಗಳಾಗಿ ದುಡಿದು ,


'ಹಿಂದೂ ಕೋಡ್ ಬಿಲ್ 'ಎಂಬ ಮಹತ್ವಪೂರ್ಣವಾದ ಸಮಾಜ ಸುಧಾರಣೆ ಕಾಯಿದೆಯನ್ನು ಅವರು ಬಹುದಕ್ಷತೆಯಿಂದ ಮಂಜೂರು ಮಂಡಿಸಿದರು. ಹಿಂದುಳಿದ ವರ್ಗದ ಉನ್ನತಿಗಾಗಿ ಗಂಭೀರ ಹೋರಾಟ ನಡೆಸಿ ,

ಹರಿಜನರ ಹಕ್ಕು ಭ್ಯಾತೆಗಳಿಗಾಗಿ ಸತ್ಯಾಗ್ರಹ ಚಳುವಳಿಯನ್ನು ನಡೆಸಿದರು .ಈ ದಿಶೆಯಲ್ಲಿ ಭಾರತೀಯರ 'ಕಾರ್ಮಿಕರ ಪಕ್ಷ'ವನ್ನು ಸ್ಥಾಪಿಸಿದರು. ಗಾಂಧಿಜೀಯವರ ಅನೇಕ ಅಭಿಪ್ರಾಯಗಳನ್ನು ಒಪ್ಪದೇ, ತಮ್ಮ ಹೋರಾಟವನ್ನುಯಾವ ವಿರೋಧವನ್ನು; ಲೆಕ್ಕಿಸದೆ ಮುಂದುವರಿಸಿದರು. ದಲಿತರಿಗೆ ನ್ಯಾಯ ಹಾಗೂ ಸಮಾನತೆ ದೊರಕಬೇಕೆಂದು ಹೋರಾಡಿದರು. ದಲಿತರಿಗೆ ಸಾಮಾಜಿಕ ಉನ್ನತಿ ಸಾಧ್ಯವಾಗಬೇಕಾದರೆ, ಶಿಕ್ಷಣವೇ ಪ್ರಬಲ ಸಾಧನವಾಗುವದೆಂದು ದೃಢವಾಗಿ ನಂಬಿದ ಅವರು 'ಪೀಪಲ್ಸ್ ಎಜ್ಯುಕೇಶನ್ ಸೊಸೈಟಿ ' ಅಸ್ಪೃಶ್ಯ ವರ್ಗದ ಶಿಕ್ಷಣಕ್ಕಾಗಿ ಅನೇಕಾನೇಕ ಶೈಕ್ಷಣಿಕ ಸಂಸ್ಥೆಗಳನ್ನು ತೆರೆಯುವ ಹೊಣೆ ಹೊತ್ತರು. ಹೀಗೆ ಅಂಬೇಡ್ಕರ್ ದಲಿತರ ನಾಯಕರಾಗಿಯೂ, ಇಡೀ ರಾಷ್ಟ್ರದ ನೇತಾರರಾಗಿಯೂ ಮಿಂಚಿ, ೧೯೫೬ರಲ್ಲಿ ನಿಧನ ಹೊಂದಿದರು.

ತ್ರಿಜ 9D



# ಮೋಡ




ನೀಲಾಕಾಶದಿ ಇರುವ ಮೋಡವೇ
ದರೆಗಿಳಿದು ಬಾ ಮೋಡವೇ
ಬಾಡಹೋಗಿದೆ ಮರಗಿಡಗಳು
ರಕ್ಷಿಸು ಬೇಗನೆ ಬಾ

ಭೂಮಿತಾಯಿಯ ಮೊರೆಯನ್ನು ಕೇಳು
ಜೀವರಾಶಿಗಳು ಬೇಡಿದೆ ಕೇಳು
ನೀರನು ನೀಡಿ ಸಹಕಾರಿಸು
ಕಣ್ಣೆರನು ಒರೆಸಿ ರಕ್ಷಿಸು

ಮೋಡವು ಬಂದಿತು ಆಗಸದಿ
ಮಕ್ಕಳು ಕುಣಿದರು ಹರುಷದಿ
ಕಣ್ಣೆರನು ಒರೆಸಿದೆ ನೀನು
ಆನಂದ ಬಾಷ್ಪವನು ಹರಿಸಿದೆ ನೀನು

ಧನ್ಯವಾದವನ್ನು ಅರ್ಪಿಸವೆ
ನದಿಗಳು ತುಂಬಿ ಹರಿದಿವೆ
ಆನಂದವ ನೀನು ನೀಡಿವೆ
ಜೀವರಾಶಿಗಳು ನಲಿದಿದೆ.



ತ್ರಿಜ 9D

# ನೀವು ಬಲ್ಲಿರಾ .........

1. ಸ್ವರಾಜ್ ಪಕ್ಷವನ್ನು ಸ್ಥಾಪಿಸಿದವರು ಯಾರು ?
2. ನಾಸಿಕ್ ನಗರವು ಯಾವ ನದಿಯ ದಡದ ಮೇಲಿದೆ ?
3. 'ರೆಡ್ ಕ್ರಾಸ್ ' ಸಂಕೇತವು ಯಾವುದರ ಸೂಚನೆಯಾಗಿದೆ ?
4. ಧರ್ಮಸ್ಥಳದ ಹಳೆಯ ಹೆಸರೇನು ?
5. ಮಾನವ ದೇಹದಲ್ಲಿನ ಒಟ್ಟು ಮೂಳೆಗಳ ಸಂಖ್ಯೆ ?
6. ತಾಯಿ ಹಾಲಿನಲ್ಲಿರುವ ವಿಟಮಿನ್ ಯಾವುದು ?
7. ಮಾಹಭಾರತದಲ್ಲಿ ಋಷಿ ಕಿಂಡಮನಿಂದ ಶಪಿಸಲ್ಪಟ್ಟವರು ಯಾರು ?
8. ಸುಪ್ರಸಿದ್ಧ ' ಚಾರ್ ಮಿನಾರ್ ' ಇರುವ ಸ್ಥಳ ಯಾವುದು ?
9. ಅತೀ ಕಡಿಮೆ ಭೂ ವಿಸ್ತೀರ್ಣ ಹೊಂದಿರುವ ರಾಜ್ಯ ಯಾವುದು ?
10. ಭಾರತ ರಾಷ್ಟ್ರಿಯ ಕಾಂಗ್ರೇಸ್ ನ ಮೊದಲ ಮಹಿಳ ಅಧ್ಯಕ್ಷ ಯಾರು ?

ಉತ್ತರ : 1. ಚಿತ್ತರಂಜನ್ ದಾಸ್ , 2. ಗೋದಾವರಿ ,3. ವೈಧ್ಯಕೀಯ ನೆರವು ,4. ಕುಡುಮ ,5. ೨೦೬ 6. ವಿಟಮಿನ್ C ,7.ಪಾಂಡು 8. ಹೈದ್ರಬಾದ್, 9. ಗೋವ , 10. ವಿಜಯಲಕ್ಷ್ಮಿ ಪಂಡಿತ್.



ತ್ರಿಜ 9 ನೇತರಗತಿ

# ಮೋಸಗಾರ ನರಿ

ಒಂದಾನೊಂದುರಿನಲ್ಲಿ ಮೊಲವೊಂದು ವಾಸವಾಗಿತ್ತು . ಅದರೊಂದಿಗೆ ನರಿಯೊಂದು ಇತ್ತು ಆವರೆಡು ಗೆಳೆಯರಾಗಿದ್ದರು.ಒಂದು ದಿನ ಮೊಲದ ವಾಸಸ್ಥಳದಲ್ಲಿ ತುಂಬಾ ತಿಂಡಿಗಳು ಹಾಗೂ ಹಣ್ಣುಗಳಿದ್ದುವು. ನರಿಯು ಆನೆ , ಸಿಂಹ ಇತ್ಯಾದಿಗಳು ಬಂದು ನಿನ್ನ ತಿಂಡಿಗಳನ್ನೆಲ್ಲಾ ತಿನ್ನಬಹುದು ಎಂದು ಮೊಲವನ್ನು ಹೆದರಿಸಿತು . ಮೊಲವು ನರಿಯಲ್ಲಿ ನೀನು ಇಲ್ಲೇ ನಿಲ್ಲು . ನಾನು ತಂದಿರುವ ಆಹಾರವನ್ನೆಲ್ಲಾ ನರಿಯು ತಿಂದಿತ್ತು. ಮೊಲವು ನರಿಯಿಂದ ಮೋಸಹೋದ ಸಿಟ್ಟಿನಲ್ಲಾ ಒಂದುದಿನ ನರಿಗೆ ನಾನು ಮೋಸ ಮಾಡುತ್ತೇನೆ ಎಂದು ಹೇಳಿಕೊಂಡು ನರಿಯಾ ಮನೆಗೆ ಹೋಗಿ ಸಿಂಹರಾಜನು ಕಾಡಿನಲ್ಲಿರುವ ಪ್ರಾಣಿಗಳಿಗೆಲ್ಲಾ ಆಹಾರವನ್ನು ಕೊಡುತ್ತಿದನೆ. ನಿನ್ನು ಕೂಡ ನನ್ನೊಂದಿಗೆ ಬಾ ಗೆಳೆಯ ಎಂದ್ ಹೇಳಿ ನರಿಯನ್ನು ಕರೆದುಕೊಂಡು ಹೋಯಿತ್ತು . ಅಲ್ಲಿ ಸಿಂಹ ರಾಜನ್ನು ಆಹಾರವಿಲ್ಲದೇ ಸುಮಾನೇ ಕುಳತಿದ್ದ ಇದನ್ನು ಕಂಡ ನರಿ ಮೊಲದಲ್ಲಿ ಹೇಳಿತ್ತು . ಯಾಕೆ ನನ್ನನು ಇಲ್ಲಿಗೆ ಕರೆದುಕೊಂಡು ಬಂದೇ ಎಂದಿತು ಅದಕೆ ಮೊಲ ಹೇಳಿತು. ನನಗೊಬ್ಬ ಮೋಸ ಮಾಡಿದಾನೆ . ಅದನ್ನು ಸಿಂಹ ರಾಜನಲ್ಲಿ ಹೇಳ ಬೇಕು ಎಂದಿತು. ನರಿಯನ್ನು ಕರೆದುಕೊಂಡು ಹೋಗಿ ಆದ ವಿಷಯವನ್ನೆಲ್ಲಾ ಹೇಳಿತು . ಅದಕ್ಕೆ ಸಿಂಹ ರಾಜ ನನ್ನಗೆ ತಿಳಿದ ಪ್ರಕಾರ ಇವನಿಗೆ ಕ್ರೂರ ಶಿಕ್ಷೆ ವಿಧಸುತ್ತೇನೆ ಎಂದಿತ್ತು . ಅದನ್ನು ನಾನು ತಿನ್ನುತ್ತೇನೆ. ಎಂದು ಸಿಂಹ ರಾಜ ಹೇಳತು. ಮೊಲವೂ ಬೇಡ ಇದನ್ನು ತಿನ್ನಬಾರದು ಇದನ್ನು ಯಾವೂದಾದರೊಂದು ಮರಕ್ಕೆ ಕಟ್ಟಿ ಹಾಕಿ ಕಾಡಿನ ಪ್ರಾಣಿಗಳನ್ನೆಲ್ಲಾ ಕರೆದು ಆ ನರಿಗೆ ಅವಮಾನವಾಗುವಂತೆ ಮಾಡಿ ಎಂದಿತ್ತು.ಇದಕ್ಕೆ ಸಿಂಹ ಒಪ್ಪಿಕೊಂಡಿತು . ಎಲ್ಲ ಪ್ರಾಣಿಗಳು ನರಿ ನೋಡಿ ಓ...... ಮೋಸಗಾರ ನೀನಗೆ ಇದೇ ಒಳ್ಳೆಯ ಶಿಕ್ಷೆ ಎಂದಾಗ ನರಿ ಕೂಗುವಂತೆ ನಟಿಸಿ ನಾನು ಇನ್ನು ಮುಂದೆ ಇಂತಹ ತಪ್ಪುಗಳನ್ನು ಮಾಡುದಿಲ್ಲ ಎಂದಾಗ ಮೊಲಕ್ಕೆ ಬೇಸರವಾಗಿ ಅದು ನರಿಯನ್ನು ಕ್ಷಮಿಸಿತು. ಹಾಗೂ ಕಟ್ಟನು ಬಿಡಿಸಿತು . ನರಿಯು ಎಲ್ಲ ಪ್ರಾಣಿಗಳ ಕೈಯಿಂದ ಪೆಟ್ಟು ತಿಂದ ಕೋಪದಲ್ಲಿ ಮೊಲಕ್ಕೆ ದೊಣ್ಣೆಯಿಂದ ತುಂಬಾ ಹೊಡೆಯಿತು . ನಂತರ ಓಡಲು ಪ್ರಯತ್ನಿಸುವಾಗ ಸಿಂಹವು ಅದನ್ನು ಹಿಡಿದು ತಿಂದುಬಿಟ್ಟಿತ್ತು.

ನೀತಿ : ‘‘ಮೋಸಗಾರನಿಗೆ ಸರಿಯಾದ ಶಿಕ್ಷೆ.”



# ಫ್ಲಾರೆನ್ಸ್ ನೈಟಿಂಗೇಲ್

ಫ್ಲಾರೆನ್ಸ್ ನೈಟಿಂಗೇಲ್ ಆಧುನಿಕ ಶುಶ್ರೂಷಾ ಕ್ರಮಕ್ಕೆತಳಪಾಯ ಹಾಕಿದ ಮಹಿಳೆ. ಜಗತಿನಾದ್ಸಂತ ಈತ ದೀಪಧಾರಿಣಿ ಮಹಿಳೆ ಎಂದು ಪ್ರಸಿದ್ಧಳಾಗಿದ್ದಾಳೆ ಈಕೆ ನರ್ಸಿಂಗ್ ವ್ಯವಸ್ಥೆಯನುವ ವೈಜ್ಞಾನಿಕರೀತಿಯಲ್ಲಿ ಪುನರಚಿಸಿದಳು.

ಫ್ಲಾರೆನ್ಸ್ ನೈಟಿಂಗೇಲ್ ಇಟಲಿಯ ಫ್ಲಾರೆನ್ಸ್ ನಲ್ಲಿ ಮೇ ೧೨ ೧೮೨೦ರಲ್ಲಿ ಜನಿಸಿದಳು. ಈಕೆ ಸುಸಂಸ್ಕೃತ ಶ್ರೀಮಂತ ಮನೆತನದ ಹೆಣ್ಣು ಮಗಳು .ಈಕೆ ಯೆಬ್ಬ ಸಾಹಿಸಿ ಕರುಣೆ.ಸುಖ ಜೀವನವನ್ನು ತ್ಯಾಜಿಸಿ ರೋಗಿಗಳ,ಗಾಯಾಳುಗಳ,ಶುಶ್ರೂಷಗೆ ತನ್ನನ್ನೇ ಸಮರ್ಪಿಸಿಕೊಂಡಳು.

೧೮೫೪ರಲ್ಲಿ ಬ್ರಿಟಿಷರು ತುರ್ಕಿ ಪರವಾಗಿ ರಷ್ಯ ದೇಶದ ವಿರುದ್ದ ಕ್ರಿಮಿಯಾ ಯುದ್ದದಲ್ಲಿ ಪಾಲ್ಗೊಂಡಾಗ ಫ್ಲಾರೆನ್ಸ್ ಸ್ಕುವಾರಿ ಕ್ರಿಮಿಯಾಗಳಲ್ಲಿ ಗಾಯಳು ಸೈನಿಕರಿಗೆ ಶುಶ್ರೂಷೆ ಮಾಡಿದಳು. ಸೇನ ಆಸ್ಪತ್ರೆಗಳಲ್ಲಿ ಸ್ವಚ್ಚತೆ ಕಾಪಾಡಲು ಶ್ರಮಿಸಿದಳು.ಇದು ರೋಗಿಗಳು ಆರೋಗ್ಯಕರ ವಾತವರಣದಲ್ಲಿ ಚಿಕ್ರಿತೆ ಪಡೆಯಲು ನೆರವಾಯಿತು. ಹಗಲು ರಾತ್ರಿ ಅನ್ನದೇ ಸೇವೆ ಮಾಡಿ ಕತ್ತಲಲ್ಲಿ ದೀಪ ಹಿಡಿದುಕೊಂಡು ತಮ್ಮ ಶುಶ್ರೂಷೆ ಮಾಡುತ್ತಿದ್ದ ಫ್ಲಾರೆನ್ಸ್ ಅವರನ್ನು ಗಾಯಾಳು ಸೈನಿಕರು ಕೃತಜ್ಞತೆಯಿಂದ ದೀಪದ ಮಹಿಳೆ ಎಂದು ಕರೆದರು.

ಫ್ಲಾರೆನ್ಸ್ ನೈಟಿಂಗೇಲ್ ಲಂಡನ್ನಿನ ಸಂತದಾಸಿ ಆಸ್ಪತ್ರೆಯಲ್ಲಿ ವಾದಿಯರ ಸೇವಾ ಶಾಲೆಯನ್ನು ಆರಂಭಿಸಿದಳು ಅಲ್ಲದೇ ಬ್ರಿಟಿಷ್ ಮಹಿಳೆ ಯಾರನ್ನು ವೈದ್ಯಕೀಯ ವ್ಯಕ್ತಿ ಮಾಡಲು ಪ್ರೋತ್ಸಾಹಿಸಿದಳು. ಇಂತಹ ತ್ಯಾಗಮಯಿಯು ೧೯೧೦ ಆಗಸ್ಟ್ ೧೩ರಂದುಲಂಡನಲ್ಲಿ ನಿಧನಳಾದಳು. ಫ್ಲಾರೆನ್ಸ್ ನೈಟಿಂಗೇಲ್ ತ್ಯಾಗ,ನಿಸ್ವಾರ್ಥಸೇವೆ, ಜಗತ್ತಿನ ಎಲ್ಲರಿಗೂ ದಾರಿ ದೀಪವಾಗಿದೆ.



trisha

# ಗುಣಕ್ಕೆ ಸಿಕ್ಕ ಪ್ರತಿಫಲ

ಒಂದನೊಂದು ಊರಿನಲ್ಲಿ ರೈತನಿದ್ದ ಅವನಿಗೆ ಒಳ್ಳೆಯಗುಣ ನಡತೆಗಳಿದ್ದವು. ಅವನ ಹಳ್ಳಿಯಲ್ಲಿರುವ ಬಡಕುಟುಂಬಗಳಿಗೆ ತನ್ನ ಕೈಲಾದ ಸಹಾಯ ಮಾಡುತ್ತಿದ್ದ. ಆದರೆ ಅವನಿಗೆ ಮಕ್ಕಳಿರಲ್ಲಿಲ. ಅದುವೇಅವನ ಕುಟುಂಬದ ದು:ಖವಾಗಿತ್ತು. ಆ ಊರಿನಲ್ಲಿ ಒಂದು ದೇವಿಯ ಗುಡಿ ಇತ್ತು . ಆ ಗುಡಿಯಲ್ಲಿ ಪೂಜೆ ಮಾಡಲು ಯಾರು ಭ್ರಾಹ್ಮಣರು ಇರಲ್ಲಿಲ್ಲ .ಆ ದೇವಿಯ ಗುಡಿ ಎಂದರೆ ಆ ಊರಿನ ಜನರಿಗೆ ವಿನಯ ,ಭಕ್ತಿ ,ಪ್ರೀತಿ, ವಿಶ್ವಾಸದಿಂದ ಮೂರು ದಿನ ಪೂಜೆ ಮಾಡಿದರೆ ಅವರಿಗೆ ಇರುವ ಕಷ್ಟ ಪರಿಹಾರವಗುತ್ತದೆ . ಎಂದು ನಂಬಿದ್ದರು. ಹಾಗೇ ರೈತ ತನ್ನ ಹೂ ತೋಟದಿಂದ ಹೂವನ್ನು ಕೊಯ್ದು ದೇವಿಗೆಂದು ಮುಡಿಪಗಿ ಇಡುತ್ತಿದ . ಹಾಗೇ ರೈತ ಮೂರು ದಿನ ಪೂಜೆಯನ್ನು ಭಕ್ತಿಯಿಂದ ಮಾಡಿದನು. ರೈತನ ಹಳ್ಳಿಗಿಂತ ನಾಲ್ಕು ಕೀಲೊಮೀಟರ್ ದೂರದಲ್ಲಿ ಒಂದು ಹಳ್ಳಿ ಇತ್ತು .ಆ ಹಳ್ಳಿಯಲ್ಲಿ ಒಂದು ಬಡಕುಟುಂಬ. ವಾಸವಾಗಿತ್ತು. ಅವರಿಗೆ ತುಂಬ ಮಕ್ಕಳಿದ್ದರು.ಅವರಿಗೆ ಒಂದು ಹೊತ್ತಿನ ತುತ್ತಿಗೆ ಗತಿಯಿರಲ್ಲಿಲ್ಲ. ಅವರು ಒಂದು ಮಗುವನ್ನು ಎಲ್ಲಿಯದರು ಬಿಡುವ ಎಂದು ತೀರ್ಮಾನಕ್ಕೆ ಬರುತ್ತಾರೆ .ಆ ಮಗುವನ್ನು ಹಳ್ಳಿಯ ಪೇಟೆಯಲ್ಲಿ ಬಿಟ್ಟು ಬಿಡುತ್ತಾನೆ.ಅವನು ಒಂದು ಗೂಡಂಗಡಿ ಹಿಂದೆ ನಿಂತು ಕದ್ದು ನೋಡುತ್ತಾನೆ. ಆ ಸಮಯಕ್ಕೆ ಸರಿಯಾಗಿ ರೈತನು ಬಂದ . ರೈತನು ಅಳುತ್ತಿದ್ದ ಮಗುವನ್ನು ಕಂಡು ಆತ ಮಗುವನ್ನು ಕೈಯಲ್ಲಿ ಹಿಡಿದು ಕೊಂಡುನು. ಆ ಮಗುವು ಯಾರ ಮಗು ಎಂದು ಪೇಟೆಯಲ್ಲಿ ಕೇಳಿದ. ಆದರೆ ಯಾರ ಮಗು ಎಂದು ಗೋತ್ತೆಯಗಲ್ಲಿಲ್ಲ. ಕೊನೆಗೆ ಮಗುವಿನ ತಂದೆಯ ಬಳಿಯೆ ಬಂದು ಕೇಳಿದ.ಆಗ ತಂದೆ ತೊದಳಿಕೊಂಡು ಉತ್ತರಿಸಿದ ಈ ಮಗು ನನ್ನಂದಲ್ಲ ಎಂದ. ಆ ಮಗು ಜೋರಾಗಿ ಅಳತೊಡಗಿತ್ತು. ರೈತ ಆ ಮಗುವಿಗೆ ಹಸಿವಾಗಿರಬಹುದೆಂದು ಎಂದು ತನ್ನ ಮನೆಗೆ ಕರೆದುಕೊಂಡು ಹೋಗುವಂದು ನಿರ್ಧರಿಸಿದ. ಹತ್ತಿರದ ಮನೆಯವರು ಯಾರ ಮಗುವೆಂದು ಕೇಳುತ್ತಾರೆ. ಆಗ ರೈತನ್ನು ನನಗೆ ಯಾರ ಮಗು

ಎಂದು ಗೊತ್ತಿಲ್ಲ. ನನಗೆ ಈ ಮಗುವು ಪೇಟೆಯಲ್ಲಿ ಸಿಕ್ಕಿದುದು. ಆಗ ಹತ್ತಿರದ ಮನೆಯವರು ಹೇಳಿದರು ನೀನು ಮೂರು ದಿನ ದೇವರ ಪೂಜೆ ಮಾಡಿದ ಕಾರಣ ನಿನಗೆ ಸಿಕ್ಕಿದ ವರವಾಗಿದೆ. ರೈತನು ಹೌದು ಎಂದು ಕೊಂಡು. ಮಗುವನ್ನು ಮನೆಗೆ ಕರೆದುಕೊಂಡು ಹೋಗುತ್ತನೆ.

ಯಾರ ಮಗು ಎಂದು ಹೆಂಡತಿ ಆಶ್ಚರ್ಯದಿಂದ ಕೇಳುತ್ತಾಳೆ. ಆಗ ರೈತ ''ನನಗೆ ಯಾರ ಮಗು ಎಂದು ತಿಳಿದಿಲ್ಲ ''.ಆಗ ಹೆಂಡತಿ ಮಗು ಎಲ್ಲಿ ಸಿಕ್ಕಿತ್ತು. ಆಗ ರೈತ ಆದ ವಿಷಯನ್ನು ಹೆಂಡತಿಗೆ ತಿಳಿಸುತ್ತಾನೆ. ಈ ಮಗುವನ್ನು ಇನ್ನು ಮುಂದೆ ನಾವೇ ಸಾಕೋಣ ಎಂದು ನಿರ್ಧರಿಸಿದರು.



TRISHA 9D



## ಕಣ್ವತೀರ್ಥದ ಇತಿಹಾಸ

ಕಣ್ವ ಮಹರ್ಷಿಗಳು ಪ್ರಪಂಚ ಪರ್ಯಟನೆಯ ಸಂದರ್ಭದಲ್ಲಿ ಕಡಲತೀರಕ್ಕೆ ಬಂದಾಗ ಸಮುದ್ರದ ಕಿನಾರೆಯಲ್ಲಿ ಒಂದು ಕೆರೆ ಮತ್ತು ಅದರ ಹತ್ತಿರವೇ ಒಂದು ಆಲದ ಮರವನ್ನು ಕಂಡರು.ಆ ಸ್ಥಳವು ತಮ್ಮ ತಪಸ್ಸಿಗೆ ಯೋಗ್ಯವೆಂದು ತಿಳಿದು ಅಲ್ಲಿಯೇ ತಪಸ್ಸಿಗೆ ಕುಳಿತರು. ಅವರು ಕುಳಿತ ಸ್ಥಳವನ್ನು ಆನಂತರ ಮಧ್ವಾಚಾರ್ಯರು ಅಭಿವೃದ್ಧಿ ಪಡಿಸಿ ಆ ಸ್ಥಳದಲ್ಲಿಒಂದು ವೃಂದಾವನವನ್ನು ನಿರ್ಮಿಸಿದರು . ಹೀಗೆ ಅದು ಕಣ್ವತೀರ್ಥವೆಂದು ಪ್ರಸಿದ್ಧಿಪಡೆಯಿತು.ಈಗಲೂ ಆ ಸ್ಥಳದಲ್ಲಿ ಒಂದು ತೀರ್ಥ ಸ್ಥಳ ಮತ್ತು ಒಂದು ದೊಡ್ಡ ಆಲದ ಮರ ಹಾಗೂ ಮಧ್ವಾಚಾರ್ಯರ ವೃಂದಾವನನಿದೆ.

ದೀಕ್ಷಾ ೯ ಸಿ



# ಕಣ್ಣಾರೆ ಕಂಡರು

ಒಂದು ಊರಿನಲ್ಲಿ ರಾಮಪ್ಪ ಮತ್ತು ಸೀತಮ್ಮ ಎಂಬ ಎರಡು ದಂಪತಿ ಒಬ್ಬಳು ಹೆಣ್ಣು ಮಗಳು ಇದ್ದಳು. ಅವಳ ಹೆಸರು ಕವನ. ಅವಳು ಈಗ ಕಾಲೇಜಿನಲ್ಲಿ ಓದುದರಲ್ಲಿ ಒಳ್ಳೆ ಅಂಕ ಪಡೆದು ಒಂದು ಒಳ್ಳೆಯ ಕೆಲಸಕ್ಕೆ ಕೈಹಾಕುತ್ತಾಳೆ. ಅವರು ಶ್ರೀಮಂತರಾಗಿದ್ದರು ಯಾವುದೇ ಕಾರಣವಿಲ್ಲದೇ ಹಣವನ್ನು ಪೊಲುಮಾಡುತ್ತಿರಲಿಲ್ಲ. ಕವನ ಕೆಲಸದಲ್ಲಿ ರಮು ಎಂಬ ಹುಡುಗನು ಕೆಲಸ ಮಾಡುತ್ತಿದ್ದ. ಕವನಳು ರಾಮು ಒಳ್ಳೆಯ ಸ್ನೇಹಿತರಾಗಿದ್ದರು. ಒಂದು ದಿವಸ ರಾಮಪ್ಪನ ಮನೆಗೆ ಒಬ್ಬ ಮುದುಕನ್ನು ಬಂದ. ರಾಮಪ್ಪನು ಮುದುಕನಲ್ಲಿ ಕೇಳಿದರು ನೀನು ಯಾರಪ್ಪ ನಿನಗೇನಾಗ ಬೇಕಿತ್ತು ಎಂದನು. ಮುದುಕ ಹೇಳಿದ ನಾ ಹೊರದೇಶದಿಂದ ಬಂದಿದ್ದೇನ.ನನಗೆ ಒಂದು ತಿಂಗಳು ಇಲ್ಲಿ ಇರಲು ಅವಕಾಶ ಕೊಡಿ ದಯವಿಟ್ಟು ಎಂದನು . ರಾಮಪ್ಪ ಅದಕ್ಕೇನಂತೆ ಧಾರಾಳವಾಗಿ ಎಂದನು. ರಾಮಪ್ಪ ಪಾಲುಬಿದ್ದ ಒಂದು ಕೋಣೆಯನ್ನು ಅವನಿಗೆ ಕೊಟ್ಟನು. ಮರುದಿನ ಬೆಳ್ಳಿಗೆ ರಾಮಪ್ಪ ಒಂದು ಆಫೀಸಿನಿಂದ ಆಮೇರಿಕಾಗೆ ಹೋಗಲು ಇತ್ತು. ಹಾಗಾಗಿ ಅವನು ಬೇಗ ಬೇಗ ಸ್ನಾನಮಾಡಿ ರೇಡಿಯಾಗಿ ಅವನ ಹೆಂಡತಿಯ ಜೊತೆಯಲ್ಲಿ ಹೇಳಿದ ಮನೆಕಡೆ ಹುಷರು ಎಂದು ಕಾರಿನಲ್ಲಿ ಹೊರಟನು. ಕವನನ ಸ್ನೇಹಿತ ರಾಮುವಿಗೆ ಒಂದು ದಿವಸ ಅವನ ಮನೆಗೆ ಆ ಮನೆಯ ಒನರ್ ಬಂದು ಅವನ ಮಾರಿಯದಿ ಹೋಗುವ ರೀತಿ ಬೈದು ಅವನನ್ನು ಮನೆಯಿಂದ ಹೊರಗೆ ಹಾಕಿದ್ದಾರೆ . ಈಗ ಅವನ ತಾಯಿ ಮತ್ತು ತಂದೆ ಇಲ್ಲ ರಾಮಪ್ಪನಿಗೆ ಅವನು ಹೋಗಿರುವ ವಿಷಯ ತಿಳಿದಿರಲ್ಲಿಲ್ಲ ರಾಮಪ್ಪನು ಅನುಮಾನ ದಿಂದ ಚಿನ್ನಾಭರಣ ಇದೆಯೆ ಎಂದು ಪರೀಶೀಲಿಸಿದನು, ಕಾಣಲಿಲ್ಲ. ರಾಮಪ್ಪನಿಗೆ ಹೆದರಿಕೆಯೂ ಆಚ್ಚರಿಯೂ ಆಯಿತು. ಆಗ ರಾಮುವು ಹೇಳಿದ ಮುದುಕನು ಯಾವಾಗಲೋ ಅವನ ಊರಿಗೆ ಹೋಗಿದ್ದಾನೆ. ರಾಮಪ್ಪನಿಗೆ ರಾಮುವಿನ ಮೇಲೆ ಅನುಮಾನ ಉಂಟಾಯಿತು. ರಾಮುವಿಗೆ ಚೆನ್ನಾಗಿ ಬೈದನು. ಆಗ ರಾಮು ಹೇಳಿದ ನಾನು ಚಿನ್ನಾಭರಣಗಳನ್ನು ಬ್ಯಾಂಕಿನ ಲಾಕರಿನಲ್ಲಿ ಇಟ್ಟಿದ್ದೇನೆ. ಯಾಕೆಂದರೆ ಸೀತಮ್ಮನಿಗೆ ಹುಷಾರಿರಲಿಲ್ಲ,ಆಗ ಮನೆಯಲ್ಲಿ ಯಾರೂ ಇರಲಿಲ್ಲಎಂದು ಹಣವನ್ನು ಬ್ಯಾಂಕಿನ ಲಾಕರಿನಲ್ಲಿಟ್ಟೆ.ಎಂದನು.ಇದನ್ನು ಕೇಳಿ ರಾಮಪ್ಪನು ನಿನ್ನ

ಮೇಲೆ ನಾನು ಸುಮ್ಮಸುಮ್ಮನೆ ಅನುಮಾನ ಪಟ್ಟೆ. ನನ್ನನ್ನು ಕ್ಷಮಿಸಿಬಿಡು ಎಂದನು. ಮಾತ್ರವಲ್ಲದೆ ತನ್ನ ಮಗಳಾದ ಕವನಳನ್ನು ರಾಮುವಿಗೆ ಕೊಟ್ಟು ಮದುವೆಯೂ ಮಾಡಿಸಿದನು.ಅವರ ಜೀವನ ಸುಖಜೀವನವಾಗಿ ಬದಲಾಯಿತು.







# AN IDEAL STUDENT

Many people regard bookish knowledge to be the all the end all' of education. This is not correct. Real education means overall development of the personality of the student. Therefore,an ideal student is the person who
takes interst in all activity of his educational institution .
He is good not only at studies ,but also in games and other activities outside the classroom. He does nothing, which many bring disgrace to him ,his parents ,his school or his nation .He tries his best to become an ideal citizen.

An ideal student is diligent. He always tries to excel others in his class. He sets an example for other in
his actions and achievements. All his teachers and friends hold him in nigh esteem college. He brings name and fame to his school discipline. Respect for elders and good manners are his chief characteristics. He makes his mind, body and spirits strong to meet the challenges of his future life. He belives that a sound mind lives in a sound body. He is very regular and punctual. He does everything at the right time and in the right manner. He does his duty faithfully and sincerely

without thinking of the reward.

An ideal student always tires to develop good habits and pleasant manners. He is polite in speech . He is always ready to help all those who are in need of him. He is honest in his dealinged with others a few friends, but all of them are true and sincere friends and noble at heart.

An ideal student always places the interest of the society and the country before his own interest. He is ready to sacrifice everything for the snake of his country . He has an unquenchable thirst for knowledge and he is always keen on learnings something new. An ideal student always devotes enough time to reading books of common interest, and the works of great men.

An ideal student is a modest person. He is never proud of his achievements. He is confident and brave. He can express his views frankly without fear the favour. He is steadfast in the struggle of life and faces all challenges bolodly and cheerfully. He can never think of using unfair means in an examination.

Restraint and self control are the chief characteristics of an ideal student. He thinks twince before he speaks or dees

a thing. He never uses impolite language. He never misses an opportunity to serves his fellow men. He is objective and considerate in his approach. He hates the sin but not the sinner. He is god fearing and does not have malice to anybody. He bears a good moral character. An ideal student is aware of the fact that if lost, something is lost; but if character is lost, everything is. An ideal student today is the ideal citizen of tomorrow.



Art by Apsana 9D

# ತಮ್ಮನ ಕಾರು

ಅಪ್ಪನು ತಂದಿಹ ಕಾರನು ನೋಡಿ
ತಮ್ಮನು ಬೆಚ್ಚಿದನು
ಚಕ್ರವತಿರುಗಿಸಿ ಕಾರನು ಬೀಳಿಸಿ
ಕ್ಷಣದಲಿ ಪುಡಿ ಪುಡಿಮಾಡಿದನು ||



ಕೋಪವು ಬಂದಿತು ಅಪ್ಪನಿಗೆ
ಬಾರಿಸಿದರೆರಡು ಬೆನ್ನಿಗೆ
ತಮ್ಮನು ಅತ್ತನು ಗಳಗಳನೆ
ದೂರನು ಕೊಟ್ಟನು ಅಜ್ಜಿಗೆ ||

ಬಂದರು ಅಜ್ಜಿನಗುನಗುತ
ನಟಿಸಿದರಪ್ಪಗೆಬೈದಂತೆ
ಖುಷಿಯೋ ಖುಷಿ ನನ ತಮ್ಮನಿಗೆ
ಖುಷಿಯೋ ಖುಷಿ ಮುದ್ದು ತಮ್ಮನಿಗೆ ||

ಅಪ್ಪನ ಸಿಟ್ಟು ಇಳಿದಿತ್ತು
ತಮ್ಮನ ದುಃಖವು ಮರೆಯಾಯ್ತು
ಕಾರನು ಪುನಃ ಜೋಡಿಸಲು
ಅಪ್ಪನ ಯತ್ನವು ಸಾಗಿತ್ತು ||

ವಚನಾ
೧ನೇ ತರಗತಿ



# ರೋಡು ರೋಲರು

ತಮ್ಮನ ರೋಡು ರೋಲರಿಗಾಗಿ
ಭರಿ ಹುಡುಕಾಟ ನಡೆದಿತ್ತು
ಅಲ್ಲಿ ಇಲ್ಲಿ ಮೇಲೆ ಕೆಳಗೆ
ಹುಡುಕಿ ನನಗೆ ಸುಸ್ತಾಯ್ತು
ಅಪ್ಪನ ಬೈಗುಳ ತಮ್ಮನ  ಅಳುವನು
ಕೇಳಿ ನನಗೆ ಸಾಕಾಯ್ತು
ಅಮ್ಮನ ಪ್ರೀತಿಯ ಮಾತನು ಕೇಳಿ
ಮುದ್ದಿನ ತಮ್ಮಗೆ ಖುಷಿಯಾಯ್ತು
ತಮ್ಮನ ರೋಲರು ಹುಡುಕಿಕೊಡೆಂಬ
ಅಮ್ಮನ ಆಜ್ಞೆಯು ಸಿಕ್ಕಿತ್ತು
ಕೋಣೆಯಲೆಲ್ಲಾ ಹುಡುಕಾಡಿ
ಅಜ್ಜಿಯ ಕೋಣೆಯ ಹೊಕ್ಕಿದ್ದೆ
ಅಜ್ಜಿಯುಮಲಗುವ ಮಂಚದಡಿ
ರೋಡು ರೋಲರು ಮಲಗಿತ್ತು
ಆಟಿಕೆಸಿಕ್ಕಿದ ತೋಷದಲಿ
ತಮ್ಮನ ಅಪ್ಪುಗೆ ಸಿಕ್ಕಿತ್ತು



ವಚನಾ
೬ನೇ ತರಗತಿ



# ಪ್ರಕೃತಿ

ಎಂಥ ಅಂದ ಎಂಥ ಚಂದ
ನಿತ್ಯ ಸ್ವಚ್ಛ ಸುಂದರ
ಸಪ್ತ ಸ್ವರಗಳ ರಸದ ತಾಣ
ನಮ್ಮ ಪ್ರಕೃತಿ ಮಂದಿರ




ಭಾಸ್ಕರ ಬರುವನು ಮುಂಜಾವಿನಲಿ
ಚಂದಿರ ಬರುವನು ಇರುಳಲ್ಲಿ
ಹೂಗಳು ಅರಳುತಿದೆ ಹಗಲಲ್ಲಿ
ಮುದುಡಿ ಮಲಗುವುವು ರಾತ್ರಿಯಲಿ


ಮರದಿ ನೋಡು ಜೇನಿನ ಗೂಡು
ಗಿಡದಿ ನೋಡು ಹಕ್ಕಿಯ ಗೂಡು
ಪಕ್ಕದಿ ಹರಿಯುತಿದೆ ತೋಡು
ಇದು ದೇವರ ಸೃಷ್ಟಿ ನೋಡು

ನೀಲ ಬಣ್ಣದ ಆಗಸದಿ
ಸೂರ್ಯ ಚಂದ್ರ ತಾರೆಗಳು
ತಂಗಾಳಿ ಸುಳಿದು ಬೀಸುತಿದೆ
ಮನಕೆ ಮುದವ ನೀಡುತಿದೆ

ಇಳೆಗೆ ಮಳೆಯು ಬರಲಿ
ಇನ್ನೂ ಹಸಿರ ತರಲಿ
ಪ್ರೀತಿ ಬೆಳೆದು, ಸ್ನೇಹವ ತಳೆದು
ನಗುನಗುತ ಒಂದಾಗಿ ಬಾಳೋಣ

ಮರಿಯಮ್ಮತ್ ತಾಬಿಯಾ ೬ ನೇ ತರಗತಿ






Bhooshan VIIIC RollNo:1

# ನೆರೆ

ಸದ್ದಿಲ್ಲದೆ ಸುದ್ದಿಯ ಮಾಡದೆ ಬರುವೆ
ಕಷ್ಟಗಳನ್ನೆ ನಮಗೆ ಹೊತ್ತು ತರುವೆ
ರಭಸದಿಂದ ನಾಡೊಳಗೆ ಬರುವೆ
ಕ್ಷಣದೊಳಗೆ ಎಲ್ಲ ಮಳುಗಿಸಿಯೆ ಬಿಡುವೆ
ಕೊಡಗು ಕೇರಳಗಳ ಮಾಡಿದೆ ನಿನ್ನ ವಶಕೆ
ಮನೆ ಮಠ ಮಂದಿರಗಳನೆಲ್ಲ ಮಾಡಿದೆ ನೀ ಆಪೋಶ
ಕ್ಷಣಾರ್ಧದಿ ನಾಶವಾಯಿತು ಪೂರ್ತಿ
ಯಾರು ಮಾಡುವುದಿಲ್ಲ ನಿನ್ನ ಪ್ರೀತಿ
ನೀ ಬರುವೆ ಖುಷಿಖುಷಿಯಾಗಿ
ಮಾಡಿ ಬಿಡುವೆ ನಮ್ಮ ಭಿಕಾರಿಯಾಗಿ
ವರುಷಗಳ ಹನಿ ಹನಿ ಬೆವರ ಸಂಪತ್ತು
ಆಯಿತು ನಿಮಿಷದಿ ಸಮತಟ್ಟು
ಸಾವು ನೋವುಗಳು ಆದುವು ಎಷ್ಟು
ತೋರಬಾರದೇ ಕರುಣೆ ಒಂದಿಷ್ಟು
ಬಡವಬಲ್ಲಿದರೆಂಬ ಬೇಧ ನಿನಗಿಲ್ಲ
ನಿನ್ನ ಮುಂದೆ  ಒಂದೇ ಎಲ್ಲಾ
ಮೂರ್ಖ ಜನರು ತಿಳಿಯದ ನೀತಿ
ತಿಳಿಸಿದೆ ಲೋಕಕೆ ನೀನೀ ರೀತಿ
ಆಸ್ತಿ ಅಂತಸ್ತು ನೀರು ಪಾಲು
ಮಾನವನ ಅಹಂಕಾರಕೆ ನೀಡಿದೆ ಸವಾಲು



ಪ್ರಕೃತಿಯ ವಿಕೃತಿಯ ಮಾಡಿದರೆ
ಸ್ವಾರ್ಥದಿ ಅನೀತಿಯ ತೋರಿದರೆ
ಪ್ರಕೃತಿಯು ಮುನಿವುದು ಮಿತಿ ಮೀರಿದರೆ
ಎನ್ನುವ ಪಾಠವ ಕಲಿಸಿದೆ ನೀ
ಸಹನೆಗೂ ಮಿತಿಯಿದೆ ತೋರಿದೆ ನೀ
ತೋರದಿರು ಮಿತಿಮೀರಿದ ಕೋಪ
ಮಾಡೆವು ಮುಂದಕೆ ಇಂತಹ ಪಾಪ
ಮಾಡಬೇಕಿದೆ ಪುನರ್ವಸತಿ
ಹುಡುಕಬೇಕಿದೆ ನಮ್ಮಯ ವಸತಿ
ಬರದಿರು ಇನ್ನು ಈ ರೀತಿ
ತೋರು ನಮ್ಮಲಿ ಇನಿತಾದರು ಪ್ರೀತಿ
ಅತಿಯಾದರೆ ಅಮೃತವೂ ವಿಷ
ಎಂಬುದ ಮರೆಯದೆ ಬಾಳುವೆವು ನಿರುತ

ರಚನೆ : ನೇಹಾ
೯ನೇ ತರಗತಿ



# ಮಾನವೀಯತೆಯ ಮರೆಯದಿರು



ಜಲದಿಂದಾಗುವ ಅಪಾಯವ ತಿಳಿಯದೆ
ಬಯಸದಿರು ಮಾನವ ಪ್ರಕೃತಿಗೆ ಕೆಡುಕ
ಪ್ರಕೃತಿಯ ಕೋಪವು ನಮಗೆ ಶಾಪವು
ತಿಳಿದುಕೊ ಮನುಜನೆ ನೀ ನಿರತ ||

ನಾಶ ನಷ್ಟಗಳು ಮಾರಣ ಹೋಮವು
ನಡೆವುದು ಪ್ರಕೃತಿಯ ಮುನಿಸಿಂದ
ಪ್ರಕೃತಿಯ ಮುನಿಸೇ ಪ್ರಕೃತಿ ವಿಕೋಪವು
ಜೀವರಾಶಿಯ ಅಂತ್ಯದ ಕಾಲವು ||


ನಾಶಹೊಂದುವ ಮನೆಗಳು ಎಷ್ಟು
ಲೆಕ್ಕಿಸಲೆಮಗದು ಸಾಧ್ಯವೆ
ಕಣ್ಣೀರಿಡುವ ಕುಟುಂಬಗಳೆಷ್ಟು
ದುಃಖವ ಸಹಿಸುವುದಸದಳವು ||




ನೊಂದಿಹ ಬೆಂದಿಹ ಸಹಜರಿಗಾಗಿ
ಕರುಣೆಯ ಕಣ್ಣನು ತೆರೆಯೋಣ
ಮಾನವ ಜನ್ಮವೆ ಶ್ರೇಷ್ಠ ಜನ್ಮವು
ಎಂಬುದೆ ಸತ್ಯವು ತಿಳಿಯೋಣ ||


ಕಷ್ಟವೆ ಬರಲಿ ,ಸುಖವೇ ಇರಲಿ
ಎಲ್ಲರಿಗಾಗಿ ಬಯಸೋಣ
ಇತರರ ಕಷ್ಟಕೆ ಸ್ಪಂದಿಸದಿದ್ದರೆ
ಮಾನವನಾಗಿಯು ಫಲವೇನು ? ||

ನೆರೆಯಿಂದಾಗಿಹ ನಾಶನಷ್ಟಗಳ
ಭರಿಸಲು ಎಲ್ಲರು ಒಂದಾಗೋಣ
ಏನೇ ಆಗಲಿ ಏನೇ ಬರಲಿ
ಮಾನವೀಯತೆಯ ಮೆರೆಯೋಣ ||




ಸಿಂಚನಾ,೯ನೇ ತರಗತಿ ,













# बाड़

केरल में कई महीने पहले बाड़ आया था।वह सिर्फ बाड़ नहीं ,भयंकर बाड़ था , जिसे हम कभी भी भूल नहीं सकते।उससे बहुत लोगों का नुकसान हुआ हैं,कई लोगों का घर तबाह हो गया हैं।


कृषि भूमी , पेड़ - पौधे ,सब नष्ट हो गये हैं। उन सब से ज्यादा कई इनसानों का जान भी चली गयी हैं ।प्राणि पक्षियाँ भी नहीं बच पाए। नुकसान ऐसा हुआ हे कि उसकी भरपाई आसनी से नहीं हो सकती ।कई माता पीताओं ने अपनी औलादों को खोया हैं।

कुछ भी कहें, लेकीन ईन सब पकृती विकोप के कारण हम सब इनसान ही हैं हमारी करतूत के वजह से ही इतना बडा नुकसान हुआ हैं।

पेड़ पौधो को काटना ,बड़ी- बड़ी इमारतों का निर्माण,ये सब इस पकृति विकोप होने का कारण है।इनसान जब दुष्ट कर्म को अंजाम देता है,उसकी भरपाई उसे ही करनी पडती है।

**"जैसी करनी वैसी भरनी "**

*शमिता,* ,



# _ DON IS A DON

Once in a city in Australia,there had a Don shane Mc Mahon and he had three sons a named,Robert,John,Alexander and shane had a friend named varadhan in India. After two years when shane was going in a car with his wife, a sudden attack had been done, first the criminal shoot to car driver and threw the bomb inside the car. Shane pushed his wife outside the car and the bomb blasts.

At hospitals, 1st son john was tensed by thinking his fathers condition. And he called his two brothers Robert and Alexander. And they were came. Then they started to investigate.

After 2 months, his father said that "stop your investigation and live happily." And they said that we will go after 2 weeks.

Then the father said "ok"."shall we go to India i wanna meet my friend Varadan".

And they went .... They went to Vardhans home and shane said about the incident. And personally Vardhan called shane and asked " i think you know the criminal who attacks you". " ya, I know he is only y from 3 sons.

And after 2 days they went back to home. And two brothers also went.

At last , Shane was expired. And in Alexander home when he was playing with dog. And a sudden call , He was shocked and was getting ready to go and his wife asked "when are you returning ?" And she went to window and their a quick shoot out and she fell down and Alexander looked at shooter and he tried to caught him and he was caught.



After 2 days, he directly went to Robert and when they think the criminal who was certainly want to kill Shane he was only John. He went to kill because he want the money and the seat of his father.

And they decided to kill John. And they kidnapped John and when they are going in car and Robert took his gun and shooted Robert suddenly !

He shooted Robert because when he enquired the shooter who killed hi his wife. The shooter said that “I was sent by your brother ! Robert.

And Alexander said “stop the car” and he called driver and said “ now you're my servant !!”He shouts and the driver takes something from car sudden shootout .

Alexander was died because the driver was a police officer. And the story ends.

written by: Nishith.k $8^{th}$ Manjeshwar

<u>Thank you</u>



# ದೇಶ ಪ್ರೇಮಿಗಳು

ವಿಜಯಪುರ ಎಂಬ ಚಿಕ್ಕ ಹಳ್ಳಿ. ಆ ಹಳ್ಳಿಯಲ್ಲಿ ಒಂದು ಗುಡಿಸಲಿನಲ್ಲಿ ತಾಯಿ ಹಾಗು ಮಗ ವಾಸಮಾಡುತ್ತಿದ್ದರು.ತಾಯಿ ಆಶ ಮತ್ತು ಮಗ ರೋಶನ್. ಅವನ ತಂದೆಯ ಹೆಸರು ಆನಂದ. ಅವರು ಭಾರತ ಸೇನೆಯಲ್ಲಿ ಕೆಲಸಮಾಡುತ್ತಿದ್ದಾರೆ. ಮಗನಿಗೂ ಸೇನೆಗೆ ಸೇರಬೇಕೆಂಬ ಆಸೆ ಆದರೆ ತಾಯಿಗೆ ಅವನು ಸೇನೆಗೆ ಸೇರುವುದು ಇಷ್ಟವಿಲ್ಲ ಯಾಕೆಂದರೆ ಅವನ ತೆಂದೆಯೂ ಸೇನೆಯಲ್ಲಿ ಇದ್ದಾರೆ ಇವನೂ ಸೇನೆಗೆ ಹೋದರೆ ತನಗೆ ಯಾರು ಗತಿ .ಎಂಬ ಕಾರಣದಿಂದ ಇವನನ್ನು ಸೇನೆಗೆ ಬಿಡುವುದಿಲ್ಲ.ಅವನ ತಂದಗೆ ಅವನು ಸೇನೆಗೆ ಸೇರಹೇಕೆಂಬ ಆಸೆ. ಹೀಗೆ ದಿನಗಳು ಕಳೆಯಿತು. ಒಂದು ದಿನ ಊರಿನ ಜನರೆಲ್ಲಾ ಆಶಾಳ ಮನೆಗೆ ಬಂದರು. ಇಬ್ಬರಿಗೂ ಇವರೆಲ್ಲಾ ಯಾಕೆ ಮನೆಗೆ ಬಂದರು ಎಂದು ತಿಳಿಯಲಿಲ್ಲ.ಊರಿನ ಜನರು ಆನಂದನನ್ನು ಭುಜದ ಮೇಲೆ ಹೊತ್ತುಕೊಂಡು ಬರುತ್ತಿದ್ದರು.ಆಶಾಳಿಗೆ ಇದನ್ನುಕಂಡು ಜ್ಞಾನ ತಪ್ಪಿತು.ಊರಿನ ಜನರು ಆಶಾಳನ್ನು ಒಳಗೆ ಮಲಗಿಸಿದರು.ಜ್ಞಾನ ಬಂದ ಕೂಡಲೇ ಅವಳು ತನ್ನ ಗಂಡನ ಹತ್ತಿರ ಓಡಿ ಬಂದು ಜೋರಿಗಿ ಕೂಗಲು ಪ್ರಾರಂಭಿಸಿದಳು.ಆನಂದರ ಮರಣ ಕ್ರಿಯೆಗಳ ನಂತರ ನಿಶಬ್ದವಾಗಿತ್ತು.ಕೆಲವು ದಿನಗಳು ಕಳೆದಾಗ ದೂರವಾಣಿಯಲ್ಲಿ ಬಂದ ವಾರ್ತೆಯನ್ನು ಕಂಡಳು.ಅದರಲ್ಲಿ ಭಾರತ ದೇಶವು ಆಪ್ಪತ್ತಿನಲ್ಲಿ ಇದೆ ಎಂಬ ವಾರ್ತೆ ಇತ್ತು.ಇದನ್ನು ಕಂಡು ಆಶ ತನ್ನ ಮಗನನ್ನು ಕರೆದು ಹೇಳಿದಳು'ಮಗೂ ಹೆತ್ತ ತಾಯಿಗಿಂತ ಮೇಲು ಭೂಮಿತಾಯಿ.ಆ ತಾಯಿ ಆಪತ್ತಿನಲ್ಲಿ ಇದ್ದಾಳೆ ಎಂದು ಅರಿತ ಮೇಲೆ ಅವಳನ್ನು ರಕ್ಷಿಸುವುದೇ ಒಬ್ಬ ಭಾರತೀಯನ ಗುರಿ.ಈಗ ಭಾರತವು ಆಪತ್ತಿನಲ್ಲಿ ಇದೆ. ನೀನು ಭಾರತ ರಕ್ಷಣೆ ಮಾಡಲು ನೀನು ಹೋಗು.ನನ್ನ ಸಂಪೂರ್ಣ ಅನುಮತಿ ಇದೆ.ನಿನ್ನ ತಂದೆಯ ಆಸೆಯಂತೆ ನೀನು ಭಾರತ ಸೇನೆಗೆ ಹೋಗು."ಎಂದು ಹೇಳಿದಳು.ಹೀಗೆ ಅವನು ಭಾರತ ಸೇನೆಗೆ ಸೇರಿ ಊರಿಗೆ ಒಳ್ಳೆಯ ಹೆಸರನ್ನು ತರುತ್ತಾನೆ.

ಸಂಗ್ರಹ:ತೇಜಸ್ವಿನಿ 9



## ರಾಜನ ಮದುವೆ

ಅದೊಂದು ದೊಡ್ಡ ಊರು. ಆ ಊರಿನ ಹೆಸರು ಅರಸನ ಕೋಟೆ. ಆ ಊರಿನ ಜನರಿಗೆ ಬ್ರಹ್ಮ ದೇವರ ಮೇಲೆ ಅಪಾರ ಪ್ರೀತಿ. ಆ ಊರಿನಲ್ಲಿ ಒಬ್ಬ ವಯಸ್ಸಾದ ಮುದುಕಿ ಇದ್ದಳು. ಆ ಮುದುಕಿಯನ್ನು ಕಂಡರೆ ಯಾರಿಗೂ ಆಗುತ್ತಿರಲಿಲ್ಲ. ರಾಜನಿಗೂ ಆ ಮುದುಕಿಯನ್ನು ಕಂಡರೆ ಆಗುತ್ತಿರಲಿಲ್ಲ. ಆ ಮುದುಕಿಗೆ ಹಟ ಜಾಸ್ತಿ.ರಾಜನು ಮುದುಕಿಗೆ ಯಾರು ದಿಕ್ಕಿಲ್ಲ ಎಂದು ಅವರ ಊರಿನಲ್ಲಿ ವಾಸಿಸಲು ಬಿಟ್ಟಿದ್ದಾನೆ. ಆ ರಾಜನಿಗೆ ತುಂಬಾ ವಯಸ್ಸಾಗಲಿಲ್ಲ. ಆ ರಾಜನಿಗೆ ಮದುವೆ ಆಗಲಿಲ್ಲ. ರಾಜನ ಮದುವೆಯ ಸುದ್ದಿ ಎಲ್ಲೆಲ್ಲೂ ಹಬ್ಬಿತು. ಅವನನ್ನು ಮದುವೆ ಯಾಗುವ ಹುಡುಗಿ ಅತ್ಯಂತ ಸುಂದರಿಯಾಗಿರಬೇಕು. ಆ ಮುದುಕಿಗೆ ರಾಜನ ಮೇಲೆ ಆಸೆ ಉಂಟಾಯಿತು. ಅವಳು ಬ್ರಹ್ಮ ದೇವರ ಕುರಿತು ತಪಸ್ಸು ಮಾಡಿದಳು.ಆ ಮುದುಕಿಗೆ ಬ್ರಹ್ಮದೇವರು ಒಂದು ವರವನ್ನು ನೀಡಿದರು. ಅದು ಏನೆಂದರೆ ಬೆಳಿಗ್ಗೆ ಯುವತಿಯಾಗಿರುತ್ತಾಳೆ, ರಾತ್ರಿ ಮುದುಕಿಯಾಗುತ್ತಾಳೆ.ರಾಜನು ಅವಳ ಸೌಂದರ್ಯವನ್ನು ಕಂಡು ಅವಳನ್ನೇ ಮದುವೆಯಾಗ ಬೇಕೆಂದು ಯೋಚಿಸುತ್ತಾನೆ. ಬ್ರಹ್ಮ ದೇವರ ಅನುಗ್ರಹದಿಂದ ಮದುವೆಯಾಗುತ್ತದೆ. ಅವರ ಮೊದಲ ರಾತ್ರಿಯಂದು ಅವಳ ನಿಜ ಸ್ವರೂಪ ತಿಳಿಯುತ್ತದೆ. ಅದರಿಂದ ಅವಳಿಗೆ ಗಲ್ಲು ಶಿಕ್ಷೆಯನ್ನು ನೀಡಿ ಮದುವೆಯ ಯೋಚನೆಯನ್ನು ಬಿಟ್ಟು ತನ್ನ ರಾಜ್ಯವನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ.

ದೀಕ್ಷಾ ೯ ಸಿ



# ಅತಿಯಾಸೆಯ ಫಲ

ಒಂದು ದ್ವೀಪದಲ್ಲಿ ಮೀನುಗಾರ ಮತ್ತು ಅವನ ಹೆಂಡತಿ ವಾಸಿಸುತ್ತಿದ್ದರು. ಅವನು ತುಂಬ ಸಂತೋಷದಿಂದ ಇರುತ್ತಿದ್ದ. ಆದರೆ ಅವನ ಹೆಂಡತಿ ಯಾವಾಗಲೂ ಸಿಟ್ಟಿನಿಂದ ಇರುತ್ತಿದ್ದಳು.ಅವಳಿಗೆ ಜೀವನದಲ್ಲಿ ತೃಪ್ತಿ ಇರಲಿಲ್ಲ. ಆದುದರಿಂದ ಅವನಿಗೆ ತುಂಬ ಬೇಸರವಿತ್ತು. ಒಂದು ದಿನ ಮೀನು ಹಿಡಿಯಲು ಹೋಗಿದ್ದ.ಮೀನುಗಳನ್ನು ಹಿಡಿಯುತ್ತಿರುವಾಗ ಅವನಿಗೆಏನೋ ಭಾರವಾದ ವಸ್ತು ಸಿಕ್ಕಿದ ಅನುಭವವಾಯಿತು. ಅವನು ಹೇಳಿದ 'ಈ ಮೀನು ತುಂಬ ದೊಡ್ಡದಾಗಿರ ಬೇಕು ". ಆದರೆ ಅದನ್ನು ನೋಡುವಾಗ ಅದು ಒಂದು ಸಣ್ಣ ಮೀನು.ಆ ಮೀನು ಹೇಳಿತು' ನನ್ನನ್ನು ಸುಮ್ಮನೆ ಬಿಡು;ನನ್ನ ಮಾಂಸ ರುಚಿ ಇಲ್ಲ' . ಅವನಿಗೆ ಆಶ್ಚರ್ಯವಾಯಿತು. ಅವನು ಆ ಮೀನನ್ನು ಸುಮ್ಮನೆ ಬಿಟ್ಟು ಮನೆಗೆ ಹಿಂದಿರುಗಿದ.

ನಡೆದ ಘಟನೆಯನ್ನು ಹೆಂಡತಿಯಲ್ಲಿ ಹೇಳಿದ. ಆಗ ಹೆಂಡತಿ, 'ನೀವು ಯಾಕೆ ಆ ಮೀನನ್ನು ಬಿಟ್ಟ್ ದ್ದೀರಿ? ನಮಗೆ ಬೇಕಾದವುಗಳನ್ನು ಆ ಮೀನಿನಲ್ಲಿ ನಮಗೆ ಕೇಳಬಹುದಿತ್ತುಆಗ ಮೀನುಗಾರ ಕೇಳಿದ ಅದು ಒಂದು ಸಣ್ಣ ಮೀನಲ್ಲವೇ? ಅದರಿಂದ ಹೇಗೆ ಸಾಧ್ಯ ?ನೋಡೋಣ ಎಂದು ಹೇಳಿ ನದಿ ತೀರಕ್ಕೆ ಹೋದನು. ಆ ಮೀನನ್ನು ಕರೆದನು. ಆಗ ಮೀನುಬಂದಿತು . ಆಗ ಅವನು ನನ್ನ ಹೆಂಡತಿಗೆ ನಿನ್ನಲ್ಲಿ ಹೇಳಲು ಕೆಲವು ಆಸೆಗಳಿವೆ ನೀನು ಅದನ್ನು ನೆರವೇರಿಸಬೇಕು ಎಂದನು. ಆಗ ಮೀನು ಅದಕ್ಕೆ ಒಪ್ಪಿಕೊಂಡಿತು. ಮೀನುಗಾರನು ಹೆಂಡತಿಯ ಆಸೆಯನ್ನು ಕೇಳಿಕೊಂಡು ನದಿ ತೀರಕ್ಕೆ ಹೋಗಿ ಮೀನಿನಲ್ಲಿ ನನ್ನ ಹೆಂಡತಿಗೆ ದೊಡ್ಡ ಅರಮನೆಯಲ್ಲಿ ರಾಣಿಯಾಗಿರಬೇಕೆಂಬ ಆಸೆ ಎಂದನು.

ಆಗ ಮೀನು'ಆಯಿತು ನೀನು ಮನೆಗೆ ಹಿಂದಿರುಗಿದಾಗ ಅವಳ ಆಸೆ ನೆರವೇರುತ್ತದೆ 'ಎಂದಿತು. ಮೀನುಗಾರನು ಮನೆಗೆ ಹೋಗಿ ನೋಡುತ್ತಾನೆ,ತನ್ನ ಮನೆಯಿರುವ ಸ್ಥಳದಲ್ಲಿ ಒಂದು ಅರಮನೆಯಿದೆ ಅದರ ಸಮೀಪಕ್ಕೆ ಹೋದಾಗ ಅವನ ಮಡದಿ ಏನು ಹಾಗೆ ನೋಡುತ್ತೀರಿ ನಾನೇ,ನಿಮ್ಮ ಹೆಂಡತಿ;ಬನ್ನಿ,ಬನ್ನಿ ಇದೆಲ್ಲ ನಿಮ್ಮ ಮೀನಿನ ಕೊಡುಗೆ.ಹೇಗಿದೆ ನನ್ನ ಉಪಾಯ!

ಎಂದಳು. ಮೀನುಗಾರನು ಹುಂ,ಉಪಾಯ ಚೆನ್ನಾಗಿದೆ ಆದರೆ....ಎಂದು ನಿಲ್ಲಿಸಿದನು.ಆದರೆ ಗೀದರೆ ಏನೂ ಇಲ್ಲ;ನಿಮ್ಮ ಭಾಗ್ಯಕ್ಕೆ ಸಂತೋಷ ಪಡಿರಿ'ಎಂದಳು.

ಕೆಲವು ದಿನಗಳ ಬಳಿಕ ಅವಳಿಗೆ ಹೊಸದೊಂದು ಯೋಚನೆ ಬಂತು.ಅವಳು ಗಂಡನನ್ನು ಕರೆದು'ನೋಡಿ ನೀವು ಇನ್ನೊಮ್ಮೆ ಮೀನು ಹಿಡಿಯಲು ಹೋಗಿ ಆ ಮೀನನ್ನು ಹಿಡಿಯಬೇಕು;ಆಗ ಅದು ನನ್ನನ್ನು ಬಿಡು ಎನ್ನುತ್ತದೆ.ಕೂಡಲೇ ನೀವು ನನ್ನ ಕೋರಿಕೆಯನ್ನು ಮಾಡಿದರೆ ಬಿಡುತ್ತೇನೆ ಎನ್ನಿ.ಅದು ಒಪ್ಪಿದಾಗ ನನ್ನ ಹೆಂಡತಿ ಅಪ್ಸರೆಯಾಗಬೇಕು ಎನ್ನಿ ಆಗ ನಾನು ಅಪ್ಸರೆಯಾಗುವೆನಲ್ಲವೆ?ಆಹಾ!ಎಷ್ಟು ಒಳ್ಳೆಯದು ಎಂದಳು. ಛೇ,ಅತಿಯಾಸೆ ಮಾಡಬಾರದಂತೆ;ನನಗೆ ನೀನು ಹೀಗಿದ್ದರೇ ಚಂದ.ಇನ್ನು ನಾನು ಮೀನಿನ ಬಳಿಗೆ ಹೋಗಲಾರೆಎಂದನು. ಆದರೆ ಅವಳಿಗೆ ನಿದ್ದೆಯೇ ಇಲ್ಲ. ಹೇಗಾದರೂ ನಾನು ಚಂದವಾಗಬೇಕು ಎಂಬ ಆಸೆಯಿಂದ ತಾನೇ ಬಲೆ ತೆಗೆದುಕೊಂಡು ಗಂಡ ಬೇಡವೆಂದರೂ ಕೇಳದೆ ಹೋಗಿ ಬಲೆ ಬೀಸಿ ಮೀನನ್ನು ಹಿಡಿದಳು. ತನ್ನ ಆಸೆಯನ್ನು ಹೇಳಿದಳು.ಮೀನು ಚೆನ್ನಾಗಿ ಯೋಚಿಸಿ ಕೇಳಿದ್ದಿ ತಾನೇ ಎಂದಿತು. 'ಹುಂ ಹೌದು.. ಯೋಚಿಸಿಯೇ ಕೇಳಿದ್ದು ಎಂದಳು. ಆಯಿತು ಹಾಗೆಯೇ ಅಗಲಿ ಎಂದಿತು.ಅಷ್ಟರಲ್ಲಿ ಮೀನುಗಾರ ಬಂದ ಆದರೆ ಕಾಲ ಮಿಂಚಿ ಹೋಗಿತ್ತು. ಅವನ ಹೆಂಡತಿ ಅಪ್ಸರೆಯಾಗಿಬಿಟ್ಟಿದ್ದಳು.ಅವನು ಬಾ ಮನೆಗೆ ಹೋಗೋಣ ಎಂದು ಕರೆದ ಆದರೆ ಅವಳಿಗೆ ನೆಲಕ್ಕೆ ಇಳಿಯಲಾಗುತ್ತಿಲ್ಲ...ಮೀನುಗಾರಲಿಗೆ ಎಲ್ಲವೂ ಅರ್ಥವಾಯಿತು.ಅವನು ಮೀನಿನಲ್ಲಿ ಎಷ್ಟು ಕೇಳಿಕೊಂಡರೂ ಅದು ಕಾಣಿಸಿಕೊಳ್ಳಲೇ ಇಲ್ಲ. ಹೆಂಡತಿಯ ತಪ್ಪಿಗೆ ದುಃಖಿಸುತ್ತಾ ಮನೆಗೆ ಹೋದನು.



# ಆಸೆಗೆ ತಕ್ಕ ಶಾಸ್ತಿ

ಒಂದು ಊರಿನಲ್ಲಿ ರಾಮಪ್ಪ ಎಂಬವನಿದ್ದ. ಅವನು ಊರಿನಲ್ಲಿಯೇ ದೊಡ್ಡ ಶೀಮಂತನಾಗಿದ್ದ. ಆದರೆ ಅವನು ಆಸೆ ಬುರುಕನೂ ಜಿಪುಣನೂಆಗಿದ್ದ. ಅವನ ಹತ್ತಿರ ಕೋಟಿ ಕೋಟಿ ಹಣ ಇತ್ತು. ಆದರೂ ದಾನ ಮಾಡುತ್ತಿರಲಿಲ್ಲ. ಬಂದ ಭಿಕ್ಷುಕರನ್ನು ಬಡವರನ್ನು ಹೊಡೆದೋಡಿಸುತ್ತಿದ್ದ.ಏನಾದರೂ ಅವನಿಗೆ ಹಣದ ಚಿಂತೆ ತಪ್ಪುತ್ತಿರಲಿಲ್ಲ. ಹಣವೇ ಸರ್ವಸ್ವ ಎಂದು ಭಾವಿಸಿದ್ದ .ಹಣಕ್ಕಾಗಿ ಏನನ್ನು ಮಾಡಲು ಹೇಸದವನಾಗಿದ್ದ.ಇದರಿಂದ ಎಲ್ಲರೂ ನೊಂದುಕೊಂಡಿದ್ದರು. ಒಂದು ದಿನ ಒಬ್ಬ ಕಡುಬಡವ ಅವನ ಮನೆಗೆ ಬಂದು ‘ಸ್ವಾಮೀ, ಮೂರು ದಿನ ಆಯ್ತು ಊಟ ಮಾಡದೆ ಒಂದು ತುತ್ತು ಅನ್ನ ನೀಡಿ ಸ್ವಾಮೀ‘,ಎಂದು ಹೇಳಿದ ಅದಕ್ಕೆ ರಾಮಪ್ಪ ‘ಹೋಗು, ಹೋಗು ಬಂದವರಿಗೆಲ್ಲಾ ಅನ್ನ ನೀಡೋಕೆಇದೇನು ಛತ್ರನಾ ಎಂದ.” ಆಗ ಬಡವ ಬೇಸರದಿಂದ ಹೊರಗೆ ಹೋದ ಏನೂ ತಿನ್ನದ ಕಾರಣ ತಲೆ ತಿರುಗಿ ಬಿದ್ದು ಬಿಟ್ಟ. ರಾಮಪ್ಪ ಅದನ್ನು ಗಮನಿಸದೇ ಬಡವನಿಗೆ ಏನೇನೋ ಬೈಯುತ್ತಾ ಹೋದ. ಆಗ ಅಲ್ಲಿಗೆ ಕಿಟ್ಟು ಎಂಬ ಒಬ್ಬ ಯುವಕ ಬಂದ. ಆತ ಒಳ್ಳೆಯ ಸ್ವಭಾವದವನಾಗಿದ್ದ.ಕಿಟ್ಟು ಬಡವನನ್ನು ಎತ್ತಿಕೊಂಡು ಮನೆಗೆ ಹೋದ. ಅವನಿಗೆ ಗೊತ್ತಿರುವ ಮದ್ದು ಮಾಡಿದ. ಅನಂತರ ಬಡವನಿಗೆ ನಾಲ್ಕು ರೊಟ್ಟಿ ಕೊಟ್ಟು ಹೊಟ್ಟೆ ತುಂಬಿಸಿದ. ಅವನು ಸ್ವಲ್ಪ ಸುಧಾರಿಸಿದ ಬಳಿಕ ಕಿಟ್ಟು ಬಡವನಲ್ಲಿ ‘ನೀವು ಇಂದು ಇಲ್ಲಿ ಉಳಿದುಕೊಳ್ಳಿರಿ ,ನಾಳೆ ಮಾತನಾಡುವ ನೀವೀಗ ಸುಸ್ತಾಗಿದ್ದೀರಿ .ಮಲಗಿ‘ ಎಂದ.

ಮರುದಿನ ಕಿಟ್ಟು ‘ನನ್ನ ಹೆಸರು ಕಿಟ್ಟು ;ನಾನು ಇದೇ ಊರಿನವನು. ಆ ಜಿಪುಣ ರಾಮಪ್ಪನೇ ನಿನ್ನೆ ನಿಮಗೆ ಹೊಡೆದದ್ದು .ನಾನು ನಿಮ್ಮನ್ನು ನೋಡಿ ಇಲ್ಲಿಗೆ ಕರೆದುಕೊಂಡು ಬಂದೆ ಎಂದ . ಆಗ ಬಡವ ‘ನನ್ನ ಹೆಸರು ರಾಜು .ನಾನು ಪರ ಊರಿನವ. ಮೂರು ದಿನದಿಂದ ಏನೂ ತಿಂದಿರಲಿಲ್ಲ .ನೀವು ನನಗೆ ಆಹಾರವನ್ನು ನೀಡಿ ನನ್ನ ಪ್ರಾಣವನ್ನು ಉಳಿಸಿದ್ದೀರಿ. ನಿಮಗೆ ದೇವರು ಒಳ್ಳೆಯದು ಮಾಡಲಿ ‘ಎಂದನು.



ಅನಂತರ ಕಿಟ್ಟು ಮತ್ತು ರಾಜು ಊರು ಸುತ್ತಿದರು. ಅನಂತರ ಕಿಟ್ಟು ರಾಜುವಿನಲ್ಲಿ ಆ ರಾಮಪ್ಪ ಊರಿನ ತುಂಬ ಮಂದಿಗೆ ತೊಂದರೆ ಕೊಟ್ಟಿದ್ದಾನೆ . ಅವನಿಗೆ ಬುದ್ಧಿಕಲಿಸಲೇಬೇಕು ಆದ್ದರಿಂದ ನಾವು ಗ್ರಾಮದೇವರ ಗುಡಿಯ ಬಳಿ ಒಬ್ಬರು ಬುದ್ದಿವಂತ ಗುರುಗಳಿದ್ದಾರೆ ಅವರಲ್ಲಿ ಸಹಾಯ ಕೇಳುವ ಎಂದ ರಾಜು ಒಪ್ಪಿಗೆ ನೀಡಿದ. ಇಬ್ಬರೂ ಹೋದರು. ಆಗ ಗುರುಗಳು ವಿಷಯ ಕೇಳಿದರು. ಕಿಟ್ಟು ವಿಷಯವನ್ನು ಹೇಳಿದ . ಆಗ ಗುರುಗಳು 'ನಾನು ಇವನ ಬಗ್ಗೆ ಕೇಳಿದ್ದೇನೆ. ''ದುಷ್ಟರಿಂದ ದೂರವಿರು ಎನ್ನುತ್ತಾರಲ್ಲ? ಹಾಗೆ ನೀವೇನೂ ಅವನ ಸುದ್ದಿಗೆ ಹೋಗಬೇಡಿ ಅಂಥವರಿಗೆ ಕಾಲವೇ ಬುದ್ಧಿ ಕಲಿಸುತ್ತೆ ಕಾದುನೋಡಿ'' ಎಂದರು.ಅವರಿಬ್ಬರೂ ಅದಕ್ಕೊಪ್ಪಿ ನಡೆದರು.

ಹೀಗೆಯೇ ಕೆಲವು ದಿನಗಳು ಕಳೆಯಿತು.ಒಂದು ದಿನ ರಾತ್ರಿ ರಾಮಪ್ಪನ ಮಡದಿ ದೀಪ ಹಿಡಿದು ಹಟ್ಟಿಗೆ ಹೋಗಿ ಬರುವಾಗ ದೀಪವು ಕೈಯಿಂದ ಕೆಳಕ್ಕೆ ಬಿದ್ದುಹೋಯಿತು. ಮನೆಗೆ ಬೆಂಕಿ ಹಿಡಿದು ಧಗಧಗನೆ ಉರಿಯತೊಡಗಿತು.''ಅಯ್ಯೋ,ಬೆಂಕಿ! ಬೆಂಕಿ! ಬನ್ರಪ್ಪೋ ,ಬನ್ರಿ; ಎಲ್ಲಾ ಉರೀತಿದೆ. ಸಹಾಯಮಾಡಿ.''ಎಂದು ರಾಮಪ್ಪ ಎಷ್ಟೇ ಬೊಬ್ಬಿಟ್ಟರೂ ಎಲ್ಲರೂ ಬಂದು ನೋಡಿದರೇ ವಿನಃ ಯಾರೊಬ್ಬರೂ ಸಹಾಯಕ್ಕೆ ಬರಲಿಲ್ಲ. ರಾಮಪ್ಪ ತನ್ನಿಂದಾದಷ್ಟು ವಸ್ತುಗಳನ್ನು ಹೊರಗೆ ಒಯ್ದನಾದರೂ ಕೂಡಿಟ್ಟ ಹಣವೆಲ್ಲ ಅವನ ಕಣ್ಣೆದುರೇ ಭಸ್ಮವಾಗಿ ಹೋಯಿತು.ಮಾನವೀಯತೆಯ ನೆಲೆಯಲ್ಲಿ ಅವನಿಗೆ ಕಿಟ್ಟು ತನ್ನ ಮನೆಯಲ್ಲಿ ಉಳಕೊಳ್ಳಲು ಜಾಗ ಕೊಟ್ಟನು. ಅನಂತರ ರಾಮಪ್ಪನಿಗೆ ಬುದ್ಧಿಬಂತು.ಅವನು ಒಳ್ಳೆಯವನಾಗಿ ಬಾಳಿದ.



**ಪಲ್ಲವಿ ೫ ಸಿ**

# ನೆನಪುಗಳು

ಕಲಿತಿರುವ  ಈ ಪಾಠಗಳ
ಮನದಲ್ಲಿ ಮರೆಯೊಲ್ಲ ನಾವು ಎಂದು
ಭೋಧಿಸಿದ ಈ ಗುರುಗಳನ್ನು
ದಿನ ನೆನೆಯುತಲಿರುವೆವು ನಾವು ಎಂದೂ

ದೂರ ದೂರ ಹೋದರೂ ನೆನಪೇ ಕಾಡುತ್ತಿದೆ
ಗೆಳೆಯರೊಂದಿಗಿನ ಆ ಪಯಣ ಮುಂದೆ ಸಾಗುತ್ತಿದೆ
ವಿದ್ಯೆಬುದ್ಧಿ ಕಲಿಸಿಕೊಟ್ಟ ಗುರುಗಳ ಮರೆಯೋ ಹಾಗಿಲ್ಲ
ಗೆಳೆಯರೊಂದಿಗಿನ ಈ ಕಡೆ ದಿನಗಳ ಎಂದು ಮರೆಯೊಲ್ಲ

ತುಂಟಾಟದದಿನ ಕಳೆದುಹೋಯಿತ್ತಲ್ಲವೇ
ಮತ್ತೇ ಅದನ್ನು ನೆನೆದರೆ ಮರಳಿ ಬರುವುದೇ
ದಿನಗಳು ಕಳೆದು ಹೋದರೆ ತಿರುಗಿ ಸಿಗದ ಕ್ಷಣಗಳೇ
ಯಾಕೆ ಹೀಗೆ ಕಾಡುತ್ತಿದೆ ನನ್ನ ಮನದಲೇ

ಗುದ್ದಾಡುವ ಕ್ಷಣ ಕಳೆದು  ಹೋಯಿತ್ತಲ್ಲವೇ

ನಲಿದಾಡುವ ದಿನ ಮತ್ತೇ ಸಿಗುವುದೇ
ಆಟ ಪಾಠದಲ್ಲಿಯೇ ನಾನು ತಲ್ಲಣನಾಗಿದ್ದೇ
ಕಲಿಸಿದ ಈ ಗುರುಗಳ ನೆನಪೇ ಕಾಡುತ್ತಿದೆ

**ಯಶಸ್ವಿನಿ 10 d**



# ರಾಮಯ್ಯ ಮತ್ತು ಭೂತ

ಹಳ್ಳಿಯೊಂದರಲ್ಲಿ ರಾಮಯ್ಯನೆಂಬ ಬಡವನಿದ್ದ ದಿನವೂ ಕಾಡಿಗೆ ಹೋಗಿ ಕಟ್ಟಿಗೆ ಕಡಿದುಕೊಂಡು ಬಂದು ಪಟ್ಟಣದ ಸಂತೆಯಲ್ಲಿ ಮಾರಿ ಬಂದ ಹಣದಿಂದ ಜೀವನ ಸಾಗಿಸುತ್ತಿದ್ದನು. ಎಂದಿನಂತೆ ಕಾಡಿಗೆ ಹೋಗಿ ಕಟ್ಟಿಗೆಗಾಗಿ ಹುಡುಕಾಡುತ್ತಿರುವಾಗ ದೊಡ್ಡಮರವೊಂದು ಅವನ ಕಣ್ಣಿಗೆ ಬಿತ್ತು. ಆ ಮರವೇರಿ ರೆಂಬೆಯನ್ನು ಕಡಿಯಲು ಕೊಡಲಿಯೆತ್ತಿದಾಗ ನಿಲ್ಲು ನಿಲ್ಲು ಈ ಮರ ಕಡಿಯಬೇಡ ಎಂಬ ಧ್ವನಿ ಕೇಳಿಬಂತು ಆಶ್ಚರ್ಯದಿಂದ ರಾಮಯ್ಯ ಸುತ್ತಲೂ ನೋಡಿದ ಯಾರೂಕಾಣಲಿಲ್ಲ. ಮತ್ತೆ ರೆಂಬೆ ಕಡಿಯಲು ಕೈಯೆತ್ತಿದ. ನಾನು ಹೇಳಲಿಲ್ಲವೇ ಮರ ಕಡಿಯಬೇಡವೆಂದು ಎಂಬ ಧ್ವನಿ ಮರುಕಳಿಸಿದಾಗ ರಾಮಯ್ಯ ಗಟ್ಟಿಯಾಗಿ 'ಯಾರು ? ಮರವೇಕೆ ಕಡಿಯಬಾರದು ? ನನ್ನ ಮುಂದೆ ಬನ್ನಿ' ಎಂದು ಕೂಗಿದ. ಆಗ ಆ ಮರದ ಮಧ್ಯಭಾಗದಿಂದ ಬೆಳ್ಳನೆಯ ಮನುಷ್ಯಾಕೃತಿಯೊಂದು ಬಂದು ನಿಂತಿತು. ದೈವ ಭೂತಗಳ ಬಗ್ಗೆ ಕಥೆ, ವದಂತಿಗಳನ್ನು ಕೇಳಿದ್ದನಾದರೂ ರಾಮಯ್ಯ ಅವುಗಳನ್ನು ನಂಬಿರಲಿಲ್ಲ.ಆದರೆ ದೆವ್ವವೇ ಕಣ್ಮುಂದೆ ನಿಂತಿದೆ! ಧೈರ್ಯ ತಂದುಕೊಂಡು ನೀನೇನೋ ಕೂಗಿದ್ದು ? ಯಾಕೆ ಮರ ಕಡಿಯಬಾರದು ?ಏನಾಗುತ್ತೆ ? ಎಂದ ಕೋಪದಿಂದ. ಆ ಭೂತ ಹೇಳಿತು ನಾನು ಈ ಮರದಲ್ಲಿ ಅನೇಕ ವರ್ಷಗಳಿಂದ ವಾಸವಿದ್ದೇನೆ. ನೀನು ಮರ ಕಡಿದ್ರೆ ನಂಗೆ ವಾಸಕ್ಕೆ ಸ್ಥಳವಿಲ್ಲದಾಗುತ್ತೆ. ದಯವಿಟ್ಟು ಹೊರಟುಹೋಗು ಎಂದಿತು.ಈ ಮಾತು ಹೇಳಿ ಹೊರಬಂದ ಭೂತ ಕೈಯಲ್ಲಿ ಚಿನ್ನದ ನಾಣ್ಯದ ಚೀಲವೊಂದನ್ನು ತಂದು ರಾಮಯ್ಯನಿಗೆ ಕೊಟ್ಟಾಗ ಆತ ಖುಷಿಯಿಂದ ಮರ ಕಡಿಯದೆ ಹಳ್ಳಿಗೆ ಬಂದು ಚಿನ್ನದ ನಾಣ್ಯಗಳನ್ನು ಮಾರಿ ಕೆಲದಿನಗಳನ್ನು ಮೋಜಿನಿಂದ ಕಳೆದ. ಮತ್ತೆಕೈ ಬರಿದಾಯ್ತು. ರಾಮಯ್ಯ ಯೋಚಿಸಿದ ಆ ಭೂತದ ಹತ್ತಿರ ಇನ್ನೂ ಬೆಲೆ ಬಾಳುವ ಅತ್ಯಮೂಲ್ಯ ಮುತ್ತು ,ರತ್ನ ,ವಜ್ರಗಳು ಇರಬಹುದು. ಮರ ಕಡಿವೆನೆಂದು ಹೆದರಿಸಿದರೆ ಎಲ್ಲಾ ಸಂಪತ್ತನ್ನೂ ಕೊಡಬಹುದು. ಜೀವನ ಪರ್ಯಂತ ಧನಿಕನಾಗಿರಬಹುದೆಂದು ನೆನೆದು ಕೊಡಲಿ ಹಿಡಿದು ಭೂತದ ಮರದತ್ತ

ಬಂದು ,ಎಲೈ ಭೂತವೇ ನಿನ್ನಲ್ಲಿರುವ ಎಲ್ಲಾ ಸಿರಿ ಸಂಪತ್ತನ್ನು ಈಗಲೇ ಕೊಟ್ಟು ಬಿಡು. ಇಲ್ಲವಾದರೆ ಈ ನಿನ್ನ ಮರವನ್ನು ಕ್ಷಣದಲ್ಲೇ ಕಡಿದು ಧರೆಗುರುಳಿಸುವೆ. ಎಂದು ಆರ್ಭಟಿಸುತ್ತಾ ಗಹಗಹಿಸಿ ನಕ್ಕನು.ಈ ಮಾತನ್ನು ಕೇಳಿ ಭೂತಕ್ಕೆ ತುಂಬಾ ಕೋಪ ಬಂತು. ಇಲ್ಲಿಯವರೆಗೆ ಶಾಂತ ರೀತಿಯಲ್ಲಿ ವ್ಯವಹರಿಸುತ್ತಿದ್ದ ಭೂತವು ಇಂದು ರಾಮಯ್ಯನೊಂದಿಗೆ ಕ್ರೂರವಾಗಿ ವರ್ತಿಸಿತು. ನೀನು ಇನ್ನು ಮುಂದೆ ಈ ಮರವನ್ನು ಕಡಿಯಲು ಬಂದರೆ ನಿನ್ನ ಜೀವ ತೆಗೆಯುತ್ತೇನೆ. ಎಂದು ಗದರಿಸಿತು. ಇದರಿಂದ ಭಯಭೀತಗೊಂಡು ಹೊರಟು ಹೋದ. ನಂತರ ಅವನು ಮರವನ್ನು ಕಡಿಯಲು ಮುಂದಾಗಲಿಲ್ಲ. ಇದರಿಂದಾಗಿ ಆ ಮರದಲ್ಲಿದ್ದ ಭೂತವು ಯಾವುದೇ ಭಯ ಭೀತಿ ಇಲ್ಲದೇ ವಾಸಿಸತೊಡಗಿತು.ಅತಿಯಾಸೆ ಸೋಮಾರಿತನಗಳಿಂದ ರಾಮಯ್ಯನು ಅನಾಯಾಸವಾಗಿ ಬಂದ ಭಾಗ್ಯವನ್ನು ಮೋಜು ಮಾಡಿ ಕಳೆದುಕೊಂಡು ಮೊದಲಿನಂತೆಯೇ ಕಟ್ಟಿಗೆ ಮಾರಿ ಜೀವಿಸತೊಡಗಿದನು.



# ಅಮ್ಮ

ಅಮ್ಮ ಎಂಬ ಒಂದೇ ಒಂದು ಮಾತು
ಮಕ್ಕಳ ಬಾಳಿಗೆ ಅದುವೇ ಒಳಿತು
ಸಾಕಿ ಸಲಹಿ ನಮ್ಮ ಬೆಳೆಸುವಳು
ಸಿಹಿ ಮುತ್ತನೊಂದು ನೀಡುವಳು ॥
ಕ್ಕಳ ಬಾಳಿಗೆ ತಾಯಿಯೇ ಹಣತೆ
ಎಂದಿಗೂ ಇರುವಳು ಮಕ್ಕಳ ಜೊತೆ
ಅವಳೇ ನನ್ನ ಬಾಳಿನ ಭಾಗ್ಯದೇವತೆ
ಅಮ್ಮನ ಮಮತೆಗೆ ನಾ ಸೋತೆ ॥



ನಾನು ಕಾಣೆನೆಲ್ಲೂ ಈ ಸಂಬಂಧ
ತಾಯಿ ಮಕ್ಕಳ ಮಧುರ ಅನುಬಂಧ
ಜಗವೆಲ್ಲಾ ಹರಡಲಿ ಅವಳ ಕೀರ್ತಿ
ಅವಳೇ ಜಗದ ಮಮತೆಯ ಮೂರ್ತಿ॥
ಸುಖ ದುಃಖಗಳ ನಡುವೆಯೂ
ಇರುವಳು ಈ ಕರುಣಾಮಯಿ
ಜಗದಲಿ ಬೇರೆಲ್ಲೂ ಸಿಗುವುದಿಲ್ಲ
ಇವಳಂಥ ವಾತ್ಸಲ್ಯಮಯಿ ॥
ಓ ತಾಯಿ ನೀನು ನನ್ನ ಜೊತೆಯಲಿರು
ಎಂದಿಗೂ ನೀ ನನ್ನ ತೊರೆಯದಿರು॥

ದೀಪ್ ರಾಜ್



## ಒಗಟು

೧.ಕೆಳಗೊಂದು ಜುಟ್ಟು, ಮೇಲೊಂದು ಜುಟ್ಟು ,ಮಧ್ಯೆ ಕಾಯಿ ಏನದು ?

ಉ.ಅನನಾಸು



೨.ಒಂಟಿ ಕಾಲಿನ ಪಕ್ಷಿಗೆ ಸಾವಿರಾರು ರೆಕ್ಕೆ.

ಉ.ತೆಂಗಿನ ಮರ

೩.ಬಿಳಿ ಕುದುರೆಗೆ ಹಸಿರು ಬಾಲ. ನಾನ್ಯಾರು ?

ಉ.ಮೂಲಂಗಿ

೪.ಬಿತ್ತದೆ ಬೆಳೆಯುವುದು, ಕಿತ್ತರೆ ಬಾಡದು ,ನೆಟ್ಟರೆ ಹುಟ್ಟದು. ಏನದು ?

ಉ.ಕೂದಲು

೫.ಜುಳು ಜುಳು ಹರಿಯುವೆ; ಬಳುಕತ ,ಏಳುತ ಸಾಗುವೆ  ನಾನ್ಯಾರು ?

ಉ.ನದಿ

೬ಕುತ್ತಿಗೆ ಇದೆ ;ತಲೆ ಇಲ್ಲ. ತೋಳಿದೆ ;ಕೈಯಿಲ್ಲ. ನಾನ್ಯಾರು ?

ಉ.ಅಂಗಿ

೯.ಅಂಗೈ ಗದ್ದೆ ,ಅದರೊಳಗೆ ನೀರು, ನೀರಿನೊಳಗೆ  ಬೇರು ಬೇರಿನೊಳಗೆ ಬೆಂಕಿ.

ಉ.ದೀಪ

೧೦.ಕೇಸರಿ ತೋಟ ;ಹಸಿರು ಗೂಟ.

ಉ.ಕ್ಯಾರೆಟ್

೧೧.ಮೇಲೆ ನೋಡಿದರೆ ನೂರು ಬಣ್ಣ. ಉಜ್ಜಿದರೆ ಒಂದೆ ಬಣ್ಣ.

ಉ.ಸಾಬೂನು

೧೨.ಕರಿ ತಲೆಯವನಿಗೆ ಬಿಳಿ ಕಾಲು.

ಉ.ಬೆಂಕಿಕಡ್ಡಿ

೧೪.ಹುಟ್ಟುತ್ತಲೆ ಹುಡುಗ ಟೋಪಿ ಹಾಕಿರುತ್ತಾನೆ.

ಉ.ಹಸಿ ಮೆಣಸು

೧೫.ಆಕಾಶದೊಳಗಿನ ಗಿಣಿ ಊಟದ ಹೊತ್ತಿಗೆ ರಾಣಿ.

ಉ.ಬಾಳೆ ಎಲೆ

೧೬.ಹಗಲು ವಿಶ್ರಾಂತಿ ಪಡೀತೀನಿ ,ರಾತ್ರಿ ಡ್ಯೂಟಿ ಮಾಡ್ತೀನಿ.

ಉ.ಹಾವು



೧೭.ಅಂಗಿ ಮೇಲೆ ಅಂಗಿ ;ಬಿಚ್ಚಿ ನೋಡಿದರೆ ನೂರು ಅಂಗಿ.

ಉ.ನೀರುಳ್ಳಿ

೧೮.ಎಲೆ ಇಲ್ಲ ,ಅಡಿಕೆ ಇಲ್ಲ ,ತುಟಿಮಾತ್ರ ಕೆಂಪಗೆ., ಮೋಡ ಇಲ್ಲ ,ಮಳೆ ಇಲ್ಲ ,ಹೊಲ

**7 ಎ ತರಗತಿ**ಹಸಿರು. ನಾನ್ಯಾರು ?


ಉ.ಗಿಳಿ

೧೯.ಹರೆಯದಲ್ಲಿ ಹಸಿರು, ಮುಪ್ಪಾದ ಮೇಲೆ ಕಪ್ಪು.ಹಾಗಾದರೆ ನಾನ್ಯಾರು ?

ಉ.ನೇರಳೆ ಹಣ್ಣು

೨೦.ನೀರಿನಲ್ಲಿ ಇದ್ದರೆ ಪ್ರಾಣ,ಹೊರಗೆ ಬಂದ್ರೆ ನಿತ್ರಾಣ.

ಉ.ಮೀನು



ಸಂಗ್ರಹ.:ಪ್ರಣಮ್ಯ **7 ಎ ತರಗತಿ**



# ಪುಟ್ಟ ಗುಬ್ಬಿ

ಪುಟ್ಟ ಗುಬ್ಬಿ ದೊಡ್ಡ ಮರದಿ ಗೂಡು ಕಟ್ಟಿತು
ಬೆಳೆದು ದೊಡ್ಡದಾಗಿ ಪುಟ್ಟ ಮೊಟ್ಟೆಯಟ್ಟಿತು
ಮೊಟ್ಟೆಯಿಟ್ಟು ಕಾವು ಕೊಟ್ಟು ಮರಿಯ ಮಾಡಿತು
ಅಲ್ಲಿ ಈಲ್ಲಿ ಸುತ್ತಿ ಸುಳಿದು ಕಾಳು ತಂದಿತು
ಪುಟ್ಟ ಮರಿಗೆ ಗುಟುಕ ಕೊಟ್ಟು ಸಾಕಿ ಬೆಳೆಸಿತು
ರೆಕ್ಕೆ ಪುಕ್ಕ ಬೆಳೆದು ಮರಿಯು ದೊಡ್ಡದಾಯಿತು
ಮರಿಗೆ ಹಕ್ಕಿ ಅತ್ತ ಇತ್ತ ಹಾರೆ ಕಲಿಸಿತು
ಹಾರ ಕಲಿತ ಮರಿ ಹಕ್ಕಿಯು ಹಾರಿಹೋಯಿತು
ಮರಿಯು ಹಾರೆ ಪುಟ್ಟಹಕ್ಕಿ ಹರುಷಪಟ್ಟಿತು

ಮನೀಷ ೬ಎ





## Advantage of Demonetisation

*On 8 November 2016 our honourable Prime minister of India Mr.Narendra Modi with a surprise move announced the implementation of demonestisation with the effect from midnight of that day itself .The government reasoned this unexpected and sudden move,even thought it caused the problem to the country's an effective countermeasure to rampant corruption and the penetration of black money in to our economy.*

*The demonitisation policy means the discontinuity of the particular currency which is circulating and replacing it with a new currency in present context it is the banning of five hundred(500) and thousand rupees (100)notes.The government stated some of the objectives behind the implementation of demonitisation policy. They are as follow ,first to make our India corruption -free nation.Second to curb the the black money.Third to controll escading price rise .Fourth to stop the flow of fund to illeagle activities.Fifth to make the people the people accountable for every money they possess and pay the tax to govrment in reher n finaly to make a cash-less society and creat digital India.*

*This move (demonetisation policy) will help to make our country a corruption -free nation.If some common people ask any favour with government officers whether is to get any documents or any other things they will ask the corruption. This is a criminal case and such type of officer should be punished and should thrown out of the services .This is not only a criminal case and such type of officers should be punished and should thrown out of the services. This is not only a criminal case but also exploitation of the common people. Common people are exploited because of such officers.The people who have the money and power will always ask corruption with common people,so that they will become and also will destruct the ecconomic stability of the country.*

*And also demonetisation will help to track the black money .The indiviual who have uncountable money should show the pan if they want to recieve any financial transaction . There will be a huge number of black money in one .They will be five hundred(500) and Thousand (1000) rupees notes.So when they will be catched by the related officers .So, demonetisation policy is an effective step to ban or stop black money.*

*And also,we know that a huge number of money is following from one -country to another country to some illegal activities, so because the implementation of demonitisation policy such flow fund to illegal activities will stop.There are some people,who are very greedy and would not like to waste one single rupees with their greediness will not pay taxes to the government but ,when they exchange their money in the back during demonetisation they will be questioned about their finance.And such greedy people should answer their finance .And if they have such of type of money they will be catched.*

*Our Prime minister Mr.Narendra Modi and RBI(Reserved Bank of India)Governer Mr. Urjith patel have planned several times and implemented this policy,Demonetisation Because this demonetisation or currency replacing process have been happened before two times in India.First time it happened under the Jawaharlal Nehru 's government and then it happened under the Janathadhal party.But it was not so success .The aim of this demonetisation policy both the times was to make our country. India corruption-free nation and to stop the black money.*

*The big-big buisness man should deal with capital or money.They have to carry it along the borders.When this demonetisation policy came into being this type of buisness mans work has been made easy because they can only take little quantity because the 500 and 1000 rupees have been made a single 2000 note .So this policy have been made easier to their work for some buisness man.*


*Most of the Black money is notes of the 500 and 1000 Rs notes.When demonetisation process occured such people who do black money had to suffer a lot.*

*Our Former Prime minister Mr. Manmohan Singh opposed these policy. Obviously at the begining the people where confused.*
*But now they realized that it was an effective step to catch such type of people in our country.*

*In my opinion, what our political readers aimed through this policy didn't happened. Their aim was to catch and punish all the criminals who do black money and take corruption. The black money have been white up till 92%.So let us join our hands to stop corruption and make India corruption-free country and let us make India developed one by developing the Economic stability of of our nation.*



*S.M Thaha Thansief 8 C*




# THE UNITED ANTS

There lived a big snakes in a forest.He fed on lizards,rats,frogs and small creatures.The whole day,he hunted there small creatures,ate them and then lazed away.He soon grew big in size but the hole in which he lived was still the same so when he entered and come out of the hole his body got scratched by the side of the hole.Once when he was coming out of his hole his body got scratched and badly hurt by the side of the hole and blood started oozing out from all over his body.Tere was an anthill hear by.Getting the smell of fresh blood.Thousands of ants streamed out of the antil.They clomed all over the snake's large body and stung him hard.The snakes tried to kill the ants but they were in a large number and had attacked him from all sides.Thousands of thorny pricks all over his body caused him up bearable pain.He wriggled in pain and tried to keep and ants off,but in vain.

At last he died a painful death

MORAL: However mighty you may be you cannot oppose too many people at a time.

**“ United we stand,divided well fall “**



# ಪಕೃತಿ ವಿಕೋಪ ಕಾರಣ ಪರಿಣಾಮ ಪರಿಹಾರೋಪಾಯಗಳು

ಪ್ರಕೃತಿಯಲ್ಲಿ ಹಲವು ತರದ ವಿಕೋಪ ಉಂಟಾಗುತ್ತದೆ. ಮಳೆ ಇಲ್ಲದಿರುವುದು ಬಂಜಾರು ಭೂಮಿ, ಹಾಗೂ ಪ್ರಳಯ , ಜ್ವಾಲಾಮುಖಿ , ಅಮತವಾದ ಮಳೆ , ಭೂಕಂಪ ಮೊದಲಾದುವುಗಳು ಹಲವು ದೇಶಗಳೆಲ್ಲೆಡೆ ಉಂಟಾಗುತ್ತದೆ. ಅದರಿಂದಾಗಿ ಜನರು ಸಾವು ಬದುಕಿನೊಂದಿಗೆ ಹೊರಾಡುತ್ತಿದ್ದಾರೆ. ಅವರು ಭಯದಿಂದ ಜೀವನ ಸಾಗಿಸುತ್ತಿದ್ದಾರೆ.

ಪ್ರಳಯಗಳು ಸಮುದ್ರ ತೀರದ ಹ್ಯೊಗೆ ತೆಗೆದಾಗ ಅಂತಹ ವಿಕೋಪ ನಡೆದ ಸಾಧ್ಯವಿದೆ. ಹಾಗೂ ಇದರಿಂದಾಗಿ ಸಮುದ್ರದ ನೀರು ಮೇಲೆಕ್ಕೆಯೇ ಬಂದು ದೇಶವನ್ನು ಅಪ್ಪಳಿಸುತ್ತದೆ . ಇದರಿಂದಾಗಿ ಹಲವಾರು ಜನರು ಸಾವನ್ನಾಪ್ಪಿದನು. ಬಂಜರು ಭೂಮಿಯು ಹೇಗೆ ಉಂಟಾಗುವುದೆಂದರೇ ಖಾಲಿ ಬಿದ್ದ ಭೂಮಿಯಲ್ಲಿ ಯಾರು ಕೃಷಿಯನ್ನು ಮಾಡುವುದಿಲ್ಲ. ಅಲ್ಲದೆ ಇತರ ತರಕಾರಿಗಳನ್ನು ಬೆಳೆಸುದಿಲ್ಲ ಅದನ್ನು ಖಾಲಿ ಬಿಟ್ಟಿದ್ದಾರೆ. ಇದರಿಂದಾಗಿ ಖಾಲಿ ಬಿದ್ದ ಭೂಮಿ ಬಂಜಾರು ಭೂಮಿಯಾಗಿದೆ. ಜ್ವಾಲಾಮುಖಿ ಎಂಬುವುದು ಬೆಂಕಿಯ ನೀರು ಇದ್ದಾಗೆ ಅದು ಹೆಚ್ಚು ಉಷ್ಣತೆಯುಳ್ಳ ಪ್ರದೇಶದಲ್ಲಿ ಉಂಟಾಗುತ್ತದೆ. ಅದು ಹೊರದೇಶದಲ್ಲಿ ಈಗಸ ಪ್ರಾಕೃತಿವಿಕೋಪ ಆಗುತ್ತದೆ. ಹಾಗೂ ಮರಗಳನ್ನು ಕಡಿಯುವುದರಿಂದ ಅದರಲ್ಲಿ ಜೀವಿಸಿದ ಪ್ರಾಣಿಪಕ್ಷಿಗಳನ್ನು ನಮ್ಮ ದೇಶಕ್ಕೆ ಬಂದು ತೊಂದರೆ ಅಥವಾ ಹಾನಿಯನ್ನು ಉಂಟುಮಾಡುತ್ತದೆ. ಇವೆಲ್ಲವೂ ಪ್ರಾಕೃತಿಕ ವಿಕೋಪಕ್ಕೆ ಕಾರಣವಾಗುತ್ತದೆ.

ಇಷ್ಟೆಲ್ಲ ವಿಕೋಪಗಳಿಂದ ನಮಗೆ ತೊಂದರೆಯನ್ನು ಉಂಟುಮಾಡುತ್ತದೆ. ಸಮುದ್ರದ ನೀರು ದೇಶವನ್ನು ಅಪ್ಪಲಿಸಿದಾಗ ಹಲವಾರು ಜನರು ಸಾವನ್ನು ಅನುಭವಿಸಿದ್ದಾರೆ. ಹಾಗೂ ಗಿಡಮರಗಳನ್ನು ಕಡಿಯುದರಿಂದ ಪ್ರಾಣಿ, ಪಕ್ಷಿಗಳನ್ನು ನಮಗೆ ತೊಂದರೆ ಕೊಡಲು ಬರುತ್ತದೆ. ಹಾಗೂ ಅವುಗಳ ಕಟ್ಟಿದಂತಹ ಗೂಡನ್ನು ಎಸೆದಂತೆ ಆಗಬಹುದು. ಕೃಷಿಮಾಡದೆ ಪಾಳು ಬಿದ್ದ



ಭೂಮಿಯಲ್ಲಿ ಕಟ್ಟಡಗಳನ್ನು ಕಟ್ಟುವುದರಿಂದ ಭೂಕಂಪ ಅಂತಹ ವಿಕೋಪಗಳ ಆದಾಗ ಆ ಕಟ್ಟಡಗಳು ಮಗುಚ್ಚಿಹೋಗಲು ಸಾಧ್ಯವಿದೆ. ಇದರಿಂದ ಜನರು ಸಾಯಬಹುದು. ಹಾಗೂ ಅತೀಯಾಗಿ ಮಳೆ ಬಂದಾಗ ಗುಡ್ಡೆ ಕುಸಿತ ಉಂಟಾಗಿ ಮನೆಯ ಮೇಲೆ ಬೀಳಬಹುದು. ಅತೀ ಮಳೆಯಿಂದಾಗಿ ನೀರು ದೇಶದೆಲ್ಲೆಡೆ ಹರಿಯಬಹುದು. ಇದರಿಂದ ಜನರು ಆಪಾಯದಲ್ಲಿ ಸಿಲುಕಬಹುದು.

ನಾವು ಮರಗಳನ್ನು ಬೆಳೆಸುವುದು ಉಳಿಸುವುದರಿಂದ ಯಾವ ಪ್ರಾಣಿ, ಪಕ್ಷಿಗಳಿಂದ ತೊಂದರೆ ಉಂಟಾಗುವುದಿಲ್ಲ. ಹಾಗೂ ಸಮುದ್ರದ ತೀರದಿಂದ ಮಣ್ಣುತೆಗೆಯದೆ ಇರುತ್ತಿದ್ದರೆ ಯಾವವೀಕೋಪವು ಉಂಟಾಗುದಿಲ್ಲ. ಆದರಿಂದ ನಾವು ಬದುಕಿ ಉಳಿಯಬಹುದು. ಮರ , ಗಿಡಗಳನ್ನು ಬೆಳೆಸಬೇಕು.ಆರಂಬಿಸಿ ಆಗ ಹವಮಾನವುಳ್ಳ ದೇಶವಾಗುತ್ತದೆ.ಆಗ ಯಾವ ಪ್ರಾಕೃತಿಕ ವಿಕೋಪಗಳು ಆಗುವುದಿಲ್ಲ.



# ನಮ್ಮ ಮನೆಯ ಕಣ್ಮಣಿ

ನನ್ನ ಮಾವನ ಮಗಳಾದ ಆಯಿಶಾಳಿಗೆ ಇನ್ನೂ ಮೂರು ವರ್ಷ ಪೂರ್ತಿಯಾಗಿಲ್ಲ. ಅವಳು ನೋಡಲು ತುಂಬಾ ಸುಂದರಿಯಾಗಿದ್ದಾಳೆ. ಅವಳೆಂದರೆ ಎಲ್ಲರಿಗೂ ಬಹಳ ಪ್ರೀತಿ. ಅವಳಷ್ಟು ತುಂಟಾಟದ ಹುಡುಗಿ ಬೇರೆಲ್ಲೂ ಇರಲಾರಳೇನೋ! ಅವಳಿಗೆ ಅಪ್ಪನೆಂದರೆ ತುಂಬಾ ಪ್ರೀತಿ. ಅಪ್ಪನನ್ನು ಕಂಡಾಗ ಮಾತ್ರ ಓಡಿ ಹೋಗಿ ಚಡ್ಡಿ ಹಾಕುತ್ತಾಳೆ. ಬೇರೆ ಯಾರೇ ಹೇಳಿದರೂ ಕೇಳುವುದಿಲ್ಲ.ಅವರು ಕಣ್ಣನ್ನು ಗದರಿಸಿ ನೋಡುವಾಗ ಓಡಿ ಹೋಗಿ ಹಾಕುತ್ತಾಳೆ.ಮಾತು ಕತೆಯೆಲ್ಲ ಮುದುಕರಂತೆ ದೊಡ್ಡ ದೊಡ್ಡ ವಿಷಯಗಳನ್ನೆಲ್ಲ ಹೇಳುತ್ತಾಳೆ. ತಂದೆಗೆ ಅವಳೇ ಆಹಾರ ಕೊಡಬೇಕು.ಬೇರೆ ಯಾರಾದರೂ ಕೊಟ್ಟರೆ ಅಳುತ್ತಾಳೆ. ಬೇಕಾದುದೆಲ್ಲವನ್ನೂ ಕೂಗಿ ಪಡೆಯುತ್ತಾಳೆ. ಮೊಬೈಲಾದರೂ ಅಷ್ಟೆ; ಅದನ್ನು ಕಂಡರೆ ಮತ್ತೆ ಏನು ಹೇಳಿದರೂ ಕೇಳುವುದಿಲ್ಲ . ಅವಳಿಗೆ ಹಾಡೆಂದರೆ ತುಂಬಾ ಪ್ರೀತಿ. ಟಿ.ವಿಯಲ್ಲಿ ಹಾಡು ಕೇಳುವಾಗ ನೃತ್ಯ ಮಾಡುತ್ತಾಳೆ.ಅವಳಿಗೆ ಇಷ್ಟವಾದ ಎರಡು ಮೂರು ಪದ್ಯಗಳಿವೆ. ಅದು ಬಂದರಂತೂ ನೃತ್ಯವೋ ನೃತ್ಯ! ಅವಳ ನೃತ್ಯ ನೋಡುವುದೆಂದರೆ ನಮಗೂ ಮೋಜು, ಬಿಟ್ಟಿ ಮನೋರಂಜನೆ.ಟಿ. ವಿಯಲ್ಲಿ ಆ ಹಾಡು ಬರಲಿಲ್ಲವಂದಾದರೆ ಜೋರು ಅಳುತ್ತಾಳೆ. ಅಂತಹ ತುಂಟಾಟದ ಹುಡುಗಿ. ಒಮ್ಮೊಮ್ಮೆ ಅವಳೊಬ್ಬಳೆ ಅಮ್ಮ ಆಟವನ್ನು ಆಡುತ್ತಾಳೆ ಮಾತಾಡ್ತಾ, ನಗುತ್ತಾ ಆಡುತ್ತಾಳೆ.

ಅವಳಿಗೆ ನಾಯಿ ಎಂದರೆ ತುಂಬಾ ಭಯ .ಒಮ್ಮೆ ಅವಳುನೆರೆಮನೆಗೆ ಹೋಗುವಾಗ ಕೆಳಗೆ ಇಳಿಯುತ್ತಿದ್ದಳು. ಆಗ ಮೇಲಿಂದ ನಾಯಿ ಬರುತ್ತಿತ್ತು. ಇವಳಿಗೆ ಏನು ಮಾಡಲು ತೋಚದೆ ಕೈಯಲ್ಲಿ ನಾಯಿಯನ್ನು ಒಮ್ಮೆಗೇ ಆಚೆ ದೂಡಿ ಕೂಗಿದಳು. ಅಷ್ಟರಲ್ಲಿ ಎಲ್ಲರು ಹೋಗಿ ಕೇಳಿದಾಗ ಅಳುತ್ತಾ ಹೇಳಿದಳು. ನಿಜಕ್ಕೂ ಅವಳನ್ನು ನೋಡುವಾಗ ಮನ ಕರಗಿತು.ಇನ್ನೊಂದೆಡೆಯಲ್ಲಿ ನಗುವೂ ಬರುತ್ತಿತ್ತು. ಯಾರಾದರು ಪೇಟೆಗೆ ಅಥವಾ ಹೊರಗೆ ಹೋಗುವಾಗ ಅವಳು ತಾನೂ

ಬರುವೆನೆಂದು ಜಗಳಮಾಡಿ ಬೇಗನೆ ಹೋಗಿ ಬಟ್ಟೆ ಧರಿಸಿ ಬರುತ್ತಾಳೆ ಅಷ್ಟರಲ್ಲಿ ಒಮ್ಮೊಮ್ಮೆ ಬಿಟ್ಟು ಹೋದಾಗ ಹಟದಿಂದ ಕೂಗಿ, ಎಲ್ಲರನ್ನು ಹೊಡೆದು ಆ ಕೋಪವನ್ನು ಉಳಿದವರ ಮೇಲೆ ತೀರಿಸುತ್ತಾಳೆ.

ಆದರೆ ಅವಳಲ್ಲಿ ಒಂದು ಒಳ್ಳೆಯ ಗುಣ ಏನೆಂದರೆ ಅವಳಿಗೆ ತಿನ್ನಲು ಏನಾದರು ಕೊಟ್ಟರೆ ಅದನ್ನು ಎಲ್ಲರಿಗೂ ಹಂಚಿ ತಿನ್ನುವ ಸ್ವಭಾವ. ಅವಳನ್ನು ಸ್ನಾನ ಮಾಡಿಸಲು ನಾನೇ ಆಗಬೇಕು . ಅಮ್ಮನ ಸೆರಗು ಹಿಡಿದರೆ ಮತ್ತೆ ಯಾರ ಬಳಿಗೂ ಬರುವುದಿಲ್ಲ.ಇಲ್ಲವಾದರೆ ಎಲ್ಲರು ಬೇಕು . ಅಂತಹ ಮುದ್ದಿನ ಹಾಗೂ ತುಂಟಾಟದ ಹುಡುಗಿ ಹಾಗೂ ಒಳ್ಳೆಯ ಬುದ್ಧಿವಂತಿಕೆಯೂ ಇರುವ ಆಯಿಶಾ ನಮ್ಮೆಲ್ಲರ ಕಣ್ಮಣಿ.



ಫಾತಿಮತಾ ರಿಝಾನಾ

10 ಸಿ ತರಗತಿ



# ತಾಯಿಯೇ ದೇವರು

ಒಂದು ಊರಿನಲ್ಲಿ ಒಬ್ಬ ಕೃಷಿಕನಿದ್ದನು.ಅವನ ಹೆಸರು ರಾಮ.ಅವನು ದುಡಿದು ಅವನ ಅಮ್ಮನನ್ನು ಶುಶ್ರೂಷೆ ಮಾಡುತಿದ್ದನು. ಅವನಿಗೆ ಮದುವೆಯಾಗಲಿಲ್ಲ.ಊರಿನ ಜನರು ಮದುವೆಯಾಗಲು ಬಲವಂತ ಮಾಡಿದರು.ಆಗ ರಾಮ ತಾಯಿಯೇ ದೇವರು ಎಂದು ಸುಮ್ಮನಿರುತ್ತಿದ್ದ.ಹತ್ತಿರದ ಮನೆಯವರು ಹೇಳಿದರು. ನಿನಗೆ ಮದುವೆಯಾದರೆ ಮತ್ತೆ ನಿನ್ನ ಅಮ್ಮನನ್ನು ನೋಡುವುದು ಮತ್ತು ಮನೆ ಕೆಲಸಗಳನ್ನು ಅವಳು ಮಾಡುವಳು.ನಿನಗೆ ಕೆಲಸ ಸುಲಭವಾಗಬಹುದು.ಅವನು ಹೇಳಿದ,ಅಯ್ಯೋ!ನೀವು ಏನು ಹೇಳುತಿದ್ದೀರಿ? ನನ್ನ ಅಮ್ಮನನ್ನು ನೋಡುವುದು ಮನೆ ಕೆಲಸ ಮಾಡುವುದು ನನಗೆ ಕಷ್ಟದ ಕೆಲಸವಲ್ಲ.ನಾನು ಮದುವೆಯಾದರೆ ಅವಳು ಹೇಳಿದಂತೆ ಕುಣಿದಾಡಬೇಕಾಗುತ್ತದೆ.ಅದಕ್ಕಾಗಿಯೇ ನಾನು ಮದುವೆಯೇ ಆಗುವುದಿಲ್ಲವೆಂದಿದ್ದೇನೆ ಎಂದನು.

ಹೀಗಿರುವಾಗ ಒಂದು ದಿನ ರಾಮ ಹಾಗೂ ಅವನ ತಾಯಿಗೆ ತೀವ್ರವಾದ ಜ್ವರ ಕಾಡಿತು. ತಾಯಿಯನ್ನು ನೋಡಿಕೊಳ್ಳುವುದಿರಲಿ,ನಡೆಯಲೂ ಸಾಧ್ಯವಾಗದ ಸ್ಥಿತಿ ಬಂತು. ಆಗ ನೆರೆಹೊರೆಯವರು ಹೇಳಿದರು ನೋಡು ಇಂತಹ ಸಂದರ್ಭದಲ್ಲಿ ಮನೆಯಲ್ಲಿ ಇನ್ನೊಬ್ಬರಿದ್ದರೆ ಒಳ್ಳೆಯದಲ್ಲವೆ ಎಂದು. ಆ ಸಮಯದಲ್ಲಿ ಅವನ ಸಮೀಪವಾಸಿಯಾದ ಒಬ್ಬಾಕೆ ಕುಂಟಿ ಹುಡುಗಿಯು ಅವರಿಬ್ಬರ ಸೇವೆಯನ್ನು ಯಾವುದೇ ಬೇಸರವಿಲ್ಲದೆ ಮಾಡಿ ಹೋಗುತ್ತಿದ್ದಳು.ರಾಮುವಿನ ಮನಸ್ಸಿನಲ್ಲಿ ಇವಳನ್ನೇ ತಾನು ಮದುವೆಯಾದರೆ ಹೇಗೆ? ಎಂಬ ಯೋಚನೆ ಬಂತು. ಮರುದಿನವೇ ಅವನು ಅವಳಲ್ಲಿ “ನೀನು ನನ್ನನ್ನು ಮದುವೆಯಾಗುವೆಯಾ?” ಎಂದು ಕೇಳುತ್ತಾನೆ. ಅದಕ್ಕೆ ಆಕೆ ತಾನು ಅವನಿಗೆ ತಕ್ಕವಳಲ್ಲವೆಂದೂ ಬೇರೆ ಒಂಳ್ಳೆಯ ಹುಡುಗಿಯನ್ನು ನೋಡುವಂತೆಯೂ ತಿಳಿಸಿದಳು.ಆದರೆ ಇದರಿಂದ ರಾಮನ ಮನಸ್ಸು ಇನ್ನಷ್ಟು ಗಟ್ಟಿಯಾಯಿತು. ಅವನು ಅವಳಲ್ಲಿ ತನಗೆ ಬಾಹ್ಯ ಸೌಂದರ್ಯ ಮುಖ್ಯವಲ್ಲವೆಂದೂ ಸನ್ಮನಸ್ಸಿನ

ಹುಡುಗಿಯಾದರೆ ಸಾಕೆಂದೂ ಹೇಳಿದನು.ಅದಕ್ಕೆ ಹುಡುಗಿಯ ಮೌನವೇ ಉತ್ತರವಾಗಿ ಸಮ್ಮತಿಯೂ ಸಿಕ್ಕಿತು. ರಾಮನು ತನ್ನ ಹಿತೈಷಿಗಳ ಮೂಲಕ ಅವಳ ಹೆತ್ತವರಲ್ಲಿ ಸಂಬಂಧವನ್ನು ಪ್ರಸ್ತಾಪಿಸಿ ಒಂದು ಶುಭ ದಿನದಂದು ಅವಳನ್ನು ಮನೆ ತುಂಬಿಸಿಕೊಂಡನು. ಮುಂದೆ ಮೂವರೂ ಸುಖವಾಗಿ ಬಾಳುವೆ ನಡೆಸಿದರು. ಹೀಗೆ ತಾಯಿಯ ಸುಖವೇ ತನ್ನ ಸುಖ ಎಂದು ಭಾವಿಸಿದ ರಾಮನ ಜೀವನವೂ ಸುಖಮಯವಾಯಿತು.

ಆಮಿನತ್ ಅರ್ಫಾನ

೯ ನೇ ತರಗತಿ



